೪೦೧

ಜನಪ್ರಸಾರ ಗ್ರಂಥಮಾಲೆ

ಕುಡಿತದ ಕೆಡಕುಗಳು

ಎ. ಎಸ್. ನಿಡವಣಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಿಶೆಂಬರ ೧೯೬೦

ಉಪನ್ಯಾಸ ಗ್ರಂಥಮಾಲೆ

೪೦೧

ಕುಡಿತದ ಕೆಡಕುಗಳು

ಎ. ಎಸ್. ನಿಡವಣಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಡಿಶೆಂಬರ, ೧೯೯೦

ಪ್ರಕಾಶಕರು :

ರು. ಮ. ಷಡಕ್ಷರಯ್ಯ
ಕಾರ್ಯನಿರ್ವಾಹಕ ನಿರ್ದೇಶಕರು,
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಡಿಶೆಂಬರ, ೧೯೬೦

ಬೆಲೆ : ರೂ. ೧-೦೦

ಮುದ್ರಕರು :

ಜಿ. ಬಿ. ಮನ್ನಾಚಾರ
ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಗ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕೂ ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೦೦ ಪುಸ್ತಿಕೆಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು–ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ರಾಮೇಗೌಡ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗವು ವ್ಯಾಸಂಗ ವಿಸ್ತರಣ ಉಪನ್ಯಾಸಮಾಲೆಯ ಆಶ್ರಯದಲ್ಲಿ ಬೆಳಗಾವಿ ಜಿಲ್ಲೆಯ ಯಾದವಾಡ ಗ್ರಾಮದಲ್ಲಿ ಏರ್ಪಡಿಸಲಾಗಿದ್ದ ಉಪನ್ಯಾಸ ಶಿಬಿರದಲ್ಲಿ "ಕುಡಿತದ ಕೆಡಕುಗಳು" ಎಂಬ ವಿಷಯದ ಕುರಿತು ಉಪನ್ಯಾಸವೀಯಲು ನನಗೆ ಅವಕಾಶ ದೊರಕಿತು. ಈ ಉಪನ್ಯಾಸದ ಪ್ರಮುಖ ವಿವರಗಳು ಇಂದು ಕಿರುಹೊತ್ತಿಗೆಯ ರೂಪದಲ್ಲಿ ಪ್ರಕಟವಾಗುತ್ತಿರುವುದು ಆನಂದದ ವಿಷಯ.

ಮದ್ಯ ಸೇವನೆಯು ಬಹು ಪ್ರಾಚೀನಕಾಲದಿಂದ ರೂಢಿಯಲ್ಲಿದೆ. ನಮ್ಮ ದೇಶ ಮಾತ್ರವಲ್ಲ, ಇಡೀ ಪ್ರಪಂಚದಲ್ಲೇ ಮದ್ಯಪಾನ ವ್ಯಸನಿಗಳ ಅಧಃಪತನವನ್ನು ತಡೆಗಟ್ಟುವದು ಪಾಶ್ಚಿಮಾತ್ಯ ರಾಷ್ಟ್ರಗಳಿಗೂ, ಅಭಿವೃದ್ಧಿಶೀಲ ರಾಷ್ಟ್ರಗಳಿಗೂ ಎದುರಾಗುವ ಅತ್ಯಂತ ಗಂಭೀರವಾದ ಸಮಸ್ಯೆಯಾಗಿದೆ. ಇಂದು ಕುಡುಕರೆಂದರೆ 'ಕಿವಿಯಲ್ಲಿ ನೋವಿರುವ ಮಕ್ಕಳ ಹಾಗೆ.'

ಕುಡಿತ ನಮ್ಮ ಸಮಾಜದಲ್ಲಿ ಒಂದು ಫ್ಯಾಶನ್ ಆಗಿ ಸಾಂಕ್ರಾಮಿಕ ರೋಗದಂತೆ ಹಬ್ಬುತ್ತಿದೆ. ಹೀಗೆ ಮದ್ಯಪಾನ, ಮಾದಕದ್ರವ್ಯಗಳ ಸೇವನೆಯಿಂದ ಕೆಲವು ಕುಡುಕರು ತಮ್ಮ ಎಲ್ಲ ಹಣವನ್ನು ನೀರಿನಂತೆ ವೆಚ್ಚಮಾಡಿ ತಮ್ಮ ಹೆಂಡಿರು, ಮಕ್ಕಳಿಗೆ 'ತುತ್ತು ಅನ್ನ, ತುಂಡು ಬಟ್ಟೆಗೆ ಗತಿ'ಯಿಲ್ಲದಂತೆ ಮಾಡುತ್ತಿದ್ದಾರೆ. ಆದಕ್ಕಾಗಿ ಈ ದುಷ್ಟ ಚಟದಿಂದ ದೂರವಿರುವದು ಉಚಿತ.

ಮದ್ಯಪಾನದಿಂದ ಶರೀರದ ಮೇಲೆ ಪರಿಣಾಮ, ನರಮಂಡಲ ನಾಶ, ಯಕೃತದೋಷ, ಮೂತ್ರಪಿಂಡದ ಮೇಲೆ ಪರಿಣಾಮ, ರಕ್ತದ ಒತ್ತಡ ಹೆಚ್ಚುವಿಕೆ ಮೊದಲಾದ ಕೆಟ್ಟ ಪರಿಣಾಮ ಗಳುಂಟಾಗುವವು. ಇಂತಹ ದುಷ್ಟ ಪರಿಣಾಮಗಳನ್ನು ತಡೆಗಟ್ಟಲು ಜನರಲ್ಲಿ ಸೂಕ್ತ ತಿಳುವಳಿಕೆ ಬೆಳೆದುಬರಬೇಕಾಗಿದೆ. ಈ ಎಲ್ಲ ವಿಷಯಗಳನ್ನು ಕುರಿತು ಎಲ್ಲ ವಿಚಾರಗಳನ್ನು ಓದುಗರ ಮುಂದಿಡಲು ನಾನು ಪ್ರಯತ್ನಿಸಿದ್ದೇನೆ. ಸಾಮಾನ್ಯ ಓದುಗರಿಗೆ ಈ ಪ್ರಕಟನೆಯು ಪ್ರಯೋಜನಕಾರಿಯಾದೀತೆಂದು ನನಗೆ ಆತ್ಮವಿಶ್ವಾಸವಿದೆ.

ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರದಲ್ಲಿ ಭಾಗವಹಿಸಲು ಆಸ್ಪದ ನೀಡಿದ್ದಕ್ಕಾಗಿ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ಆಗಿನ ನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಹಾಗೂ ಸಹಾಯಕ ನಿರ್ದೇಶಕರಾದ ಶ್ರೀ ಎಲ್. ಎಮ್. ಗುಡ್ಡೀನ ಮತ್ತು ಮುದ್ರಣ ವಿಭಾಗದ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಕಲಾ ಹಾಗು ವಾಣಿಜ್ಯ ಮಹಾವಿದ್ಯಾಲಯ ರಾಯಭಾಗ

ಎ. ಎಸ್. ನಿಡವಣಿ

ಪರಿವಿಡಿ

೧ ಪೀಠಿಕೆ

ಮೋಜಿಗಾಗಿ, ಖುಷಿಗಾಗಿ ಆರಂಭವಾಗುವ ಮದ್ಯಪಾನದ ಸೇವನೆ ಯಾವಾಗ ಹವ್ಯಾಸವಾಗುತ್ತದೆ. ಯಾವಾಗ ದುಷ್ಟ ಚಟವಾಗಿ ಹರಡುತ್ತದೆ ಎಂದು ಹೇಳುವುದು ಕಠಿಣವಾಗಿದೆ. ಇಂದು ಮದ್ಯಪಾನ ಸೇವನೆ ನಾಗರಿಕ ಜನಜೀವನದ ಒಂದು ಅಂಗವಾಗಿ ಬೆಳೆಯುತ್ತಿದೆ. ಯಾರು ಸರೆ, ಸಿಂದಿಯನ್ನು ಕುಡಿಯುವುದಿಲ್ಲವೋ ಅವರನ್ನು ಅನಾಗರಿಕರಂತೆ ಕಾಣಲಾಗುತ್ತದೆ. ಕುಡಿಯುವ ದುರಭ್ಯಾಸ ಜಗತ್ತಿನ ತುಂಬ ಹರಡಿದೆ. ಇವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಇಂದು ನವನಾಗರಿಕತೆಯ ಹೆಸರಿನಲ್ಲಿ ಹೆಚ್ಚುತ್ತಿರುವ ಮದ್ಯಪಾನಕ್ಕೆ ಬಲಿಯಾಗುತ್ತಿರುವವರಲ್ಲಿ ೩೦ ರಿಂದ ೫೦ ವರ್ಷ ವಯೋಮಾನದವರು ಹೆಚ್ಚಾಗಿ ಕಂಡುಬರುತ್ತಾರೆ. ಹೀಗೆ ಕುಡಿತ ನಮ್ಮ ಸಮಾಜದಲ್ಲಿ ಒಂದು ಫ್ಯಾಶನ್‌ವಾಗಿ, ಜೀವನ ಮಟ್ಟದ ಅಂತಸ್ತಿನ ಸಂಕೇತವಾಗಿ ಸಾಂಕ್ರಾಮಿಕ ರೋಗದಂತೆ ಹಬ್ಬುತ್ತಿದೆ. ಮದ್ಯಪಾನಿಗಳಲ್ಲಿ ಮುಖ್ಯವಾಗಿ ತರುಣ ಪೀಳಿಗೆಯ ಸಂಖ್ಯೆ ಹೆಚ್ಚುತ್ತಿರುವದು ವಿಷಾದದ ಸಂಗತಿ. ಕುಡಿಯುವದು ಅನೈತಿಕವಾಗಿದೆ ಎಂದು ತಿಳಿಯುವ ಸಮಯವೊಂದಿತ್ತು. ಆದರೆ ಇಂದು ಕಳ್ಳತನ, ವೇಶ್ಯಾವೃತ್ತಿಗಿಂತ ಮದ್ಯಪಾನ ಹೇಯವಾಗಿದೆ. ಮದ್ಯಪಾನ ತಯಾರಕ ಸಂಸ್ಥೆಗಳು ಇಂದು ಕೋಟಿಗಟ್ಟಲೇ ಲಾಭ ಮಾಡಿಕೊಳ್ಳುತ್ತಿವೆ. ಮದ್ಯಪಾನದ ಚಟವನ್ನು ಕಡಿಮೆ ಮಾಡಲು ಸರಕಾರ ಒಣದಿನಗಳನ್ನು ಆಚರಿಸಿತು. ನಮ್ಮ ದೇಶದಲ್ಲಿ

ಮದ್ಯಪಾನದಿಂದಾಗುವ ಅನಾಹುತಗಳನ್ನು ತಡೆಯಲು ಕಠಿಣವಾದ ಮದ್ಯಪಾನ ನಿಷೇಧ ಕಾನೂನು ರಚನೆಯಾಗಿದ್ದವು. ಕೆಲ ರಾಜ್ಯಗಳು ಮದ್ಯಪಾನ ನಿಷೇಧವನ್ನು ಜಾರಿಗೆ ತಂದಿದ್ದವು. ಆದರೆ ಇದುವರೆಗೆ ಯಾವ ಸರಕಾರದಿಂದಲೂ ಇದನ್ನು ಸಂಪೂರ್ಣ ನಿಯಂತ್ರಿಸುವದು ಸಾಧ್ಯವಾಗಿಲ್ಲ.

ಈ ಕುಡಿತದಿಂದಾಗುವ ದುಷ್ಪರಿಣಾಮ ಯಾವ ರೀತಿಯದು? ಇದು ನಮ್ಮನ್ನು ಯಾವ ಕಡೆಗೆ ಕೊಂಡೊಯ್ಯುತ್ತಿದೆ. ಕುಡಿತವು ಸರ್ವನಾಶಗಳನ್ನು ತರಬಲ್ಲದು. ಹಾಗಿದ್ದರೆ ಈ ವ್ಯಸನದಿಂದ ಮುಕ್ತಿ ಸಾಧ್ಯವೇ ? ಈ ಪ್ರಶ್ನೆಗಳು ಇಂದು ತಲೆಎತ್ತಿ ನಿಂತಿವೆ. ಕುಡುಕರು ಕುಡುಕರಾಗುವುದಕ್ಕೆ ಅವರೆಷ್ಟು ಕಾರಣರೋ ಸಮಾಜವು ಅಷ್ಟೇ ಕಾರಣ. ಇದೊಂದು ದೊಡ್ಡ ರಾಜಕೀಯ ಪ್ರಶ್ನೆಯಾಗಿದೆ. ಇಂದು ಭಾರತದಲ್ಲಿ 'ಅಲ್ಕೋಹಾಲಿಕ್ಸ ಅನಾನಿಮಸ್' ಎಂಬ ಸಂಸ್ಥೆ ಎಲ್ಲ ವಯಸ್ಸಿನ ಕುಡುಕರಿಗೆ ಅವರು ಮನಸ್ಸು ಮಾಡಿದಲ್ಲಿ ಈ ಅಮಲು ರೋಗವನ್ನು ಕಡಿಮೆ ಮಾಡಲು ತನ್ನ ಸಹಾಯವನ್ನು ಕೋರುತ್ತಿದೆ. ಆದರೂ ಯಾವ ಸಂಘ, ಸಂಸ್ಥೆಗಳು ಈ ಕುಡಿತದ ಪ್ರಮಾಣವನ್ನು ಕಡಿಮೆ ಮಾಡಲು ಯಶಸ್ವಿಯಾಗಿಲ್ಲ. ಹೀಗೆ ಸೆರೆ, ಸಿಂದಿಯನ್ನು ಕುಡಿಯುವದರಿಂದ ದೈಹಿಕ ದೌರ್ಬಲ್ಯ, ಬುದ್ಧಿ ಭ್ರಮೆ. ಕೊನೆಯದಾಗಿ ಶರೀರ ನಾಶ ಹೊಂದುವದು.

೩ ಕುಡಿತದ ಉಗಮ ಹಾಗೂ ಬೆಳವಣಿಗೆ

ಪ್ರಾಚೀನ ಕಾಲದಲ್ಲಿ ಬಹುಮುಖ್ಯವಾಗಿ ಮದ್ಯವನ್ನು ತಯಾರಿಸುವದು ಮತ್ತು ಸೇವಿಸುವದು ನಡೆದು ಬಂದ ದಾರಿಯೇ. ಮದ್ಯಪಾನ ಇಂದು ನಿನ್ನೆಯ ಹವ್ಯಾಸವಲ್ಲ. ಸುಮಾರು ಐದು ಸಾವಿರ ವರ್ಷಗಳಷ್ಟು ಹಿಂದೆಯೇ ನಮ್ಮ ದೇಶದಲ್ಲಿ ಆರ್ಯರು 'ಸೋಮರಸ' ಕುಡಿಯುತ್ತಿದ್ದರು. ರಾಜಮಹಾರಾಜರು ತಮ್ಮ ಆಸ್ಥಾನದಲ್ಲಿ ಯಾರಾದರೂ ಮದ್ಯ ಸಿಂದಿಯನ್ನು ಕುಡಿದರೆ ತಕ್ಕಮಟ್ಟಿನ ಕಟ್ಟುಪ್ಪಣೆಗಳನ್ನು ಹೇರುತ್ತಿದ್ದರು. ಕುಡುಕರು ಮದ್ಯಪಾನ ಮಾಡಲು ಊರ ಹೊರಗೆ ಹೋಗಬೇಕು. ಕೇವಲ ಸಂಜೆಯ ವೇಳೆಯಲ್ಲಿಯೇ ಕುಡಿಯಬೇಕು. ಕುಡುಕರು ಬೇರೆ ಯಾವರ ಮನೆಗೆ ಹೋಗಕೂಡದು. ವಿದ್ವಾಂಸರಿಗೆ ಇವರನ್ನು ಭೆಟ್ಟಿ ಮಾಡಕೂಡದು. ಯಾರು ಈ ನಿಯಮಾವಳಿಗಳನ್ನು ಉಲ್ಲಂಘಿಸುವರೋ ಅಂಥವರಿಗೆ ಕಠಿಣ ಶಿಕ್ಷೆ ಕೊಡಲಾಗುತ್ತಿತ್ತು.

ಮಹಾಭಾರತದ ಒಂದು ಸನ್ನಿವೇಶ ತೆಗೆದುಕೊಂಡು ನೋಡಿದಾಗ ಭಯಂಕರ ಸುರಾಪಾನ ಮಾಡಿ ಮದೋನ್ಮತ್ತರಾದ ಯಾದವರು ಒಬ್ಬರಿಗೊಬ್ಬರು ಹುಚ್ಚರಂತೆ ಅಲೆದಾಡುತ್ತ, ಜಗಳಾಡುತ್ತ ಅವಾಚ್ಯ ಶಬ್ದಗಳಿಂದ ಬೈದಾಡುತ್ತ, ತಂದೆ, ಮಗ, ಅಣ್ಣ, ತಮ್ಮಂದಿರು, ಬೀಗರು ಎನ್ನದೆ ಕುಡಿತದ ಗುಂಗಿನಲ್ಲಿ ಹೊಡೆದಾಡಿ ಬೆಂಕಿಯಲ್ಲಿ ಬಿದ್ದ ಪತಂಗದ ಹುಳಗಳಂತೆ ಸತ್ತು ಹೋದರು. ಈ ಹೋರಾಟವನ್ನು ಬಗೆಹರಿಸಲು ಶ್ರೀ ಕೃಷ್ಣನ ಆಟ ಆ ಮದೋನ್ಮತ್ತರ ಎದುರಿನಲ್ಲಿ ನಡೆಯಲಿಲ್ಲ. ತಮ್ಮ ಗಂಡಂದಿರನ್ನು, ಮಕ್ಕಳನ್ನು ಕಳೆದುಕೊಂಡ ಯಾದವ

ಹೆಣ್ಣು ಮಕ್ಕಳ ಗೋಳು ಕನಿಕರವಾಗಿತ್ತು. ಇದರಿಂದ ಮದ್ಯ ಪಾನವು ಬಹು ದುಷ್ಟ ಚಟವಾಗಿದೆ. ಇದರ ವಶವಾಸಕ್ಕೆ ಬಲಿಬಿದ್ದವರು ತಮ್ಮ ಜೀವನವನ್ನು ನಾಶಮಾಡಿಕೊಳ್ಳುವದರಲ್ಲಿ ಸಂಶಯವಿಲ್ಲ. ಮಧ್ಯಯುಗ ಹಾಗೂ ಮುಸಲ್ಮಾನರ ಕಾಲದಲ್ಲಿ ಮದ್ಯಪಾನ ಮತ್ತು ಮಾದಕ ದ್ರವ್ಯಗಳ ಸೇವನೆಯು ರಾಜ ಮಹಾರಾಜರ ಆಸ್ಥಾನದಲ್ಲಿ ಬೆಳೆದು ಬಂದ ಪ್ರವೃತ್ತಿಯು.

ಪ್ರಾಚೀನ ಪರ್ಶಿಯಾ ಎಂಬ ರಾಷ್ಟ್ರದಲ್ಲಿ ಅರಸೊತ್ತಿಗೆಯು ಬಹು ವಿಜೃಂಭನೆಯಿಂದ ಸಾಗಿತ್ತು. ಅರಸನ ಅರಮನೆಯಲ್ಲಿಯ ದ್ರಾಕ್ಷೆ ಹಣ್ಣುಗಳು ಒಂದು ದಿನ ತೀರ ಕೆಟ್ಟಿದ್ದವು. ಆ ಹಣ್ಣಿನಿಂದ ಬಂದ ರಸವನ್ನು ವಿದ್ವಾಂಸರು ಪರೀಕ್ಷಿಸಿದಾಗ ಇದೊಂದು 'ವಿಷ' ಎಂಬುದು ಕಂಡುಬಂದಿತು. ಅದಕ್ಕೆ 'poison' ಎಂದು ಲೇಬಲ್ ಬಿತ್ತು. ಒಂದು ದಿನ ಆಸ್ಥಾನದ ಸೇವಕಿ ತಿಳಿಯದೇ ಆ ಹಣ್ಣಿನ ರಸ ಸೇವಿಸಿದಳು. ಪೂರ್ಣ ಪ್ರಜ್ಞಾಹೀನಳಾಗಿ ಬಿಟ್ಟಳು ನಂತರ ಚೇತರಿಸಿಕೊಳ್ಳುತ್ತ ತನ್ನ ಕೆಟ್ಟ ಅನುಭವ ಹೇಳಿದಳು. ಹೀಗೆ ಮದ್ಯದ ಉಗಮವಾದದ್ದು ಕಂಡುಬರುತ್ತದೆ.[೧]

ಗೋವಾ ಎಂದ ಕೂಡಲೇ ಬಹಳಷ್ಟು ಜನರಿಗೆ ನೆನಪಾಗುವ ಶಬ್ದ 'ಫೆನ್ನಿ' ಎಂಬ ಮದ್ಯ. ಗೋವಾಕ್ಕೆ ಬಂದ ಪಾದ್ರಿಗಳು ಬದುಕನ್ನು ಉತ್ತಮಗೊಳಿಸುವ ಸಾಧನಗಳ ಪರಿಚಯವಿದ್ದವರು. ಗೋವಾದ ಹಳ್ಳಿಯ ಜನರಿಗೆ ಕಳ್ಳಭಟ್ಟಿ ಹೇಗೆ ಪ್ರಾರಂಭಿಸಬೇಕೆಂಬ ಬಗ್ಗೆ ತಿಳಿಸಿಕೊಟ್ಟರು. ಪೋರ್ತುಗೀಸರು ೧೫೧೦ ನೆಯ ಇಸ್ವಿಯಲ್ಲಿ

---

೧ ಎಚ್. ಬಿ. ಮಾಳಿ. ಭಾರತೀಯ ಸಾಮಾಜಿಕ ವಿಭಜನೆ.

ಮೊದಲ ಬಾರಿಗೆ ಭಾರತಕ್ಕೆ ಬಂದಾಗ ಬ್ರಾಜಿಲ್‌ನಿಂದ ಗೇರು ಗಿಡಗಳನ್ನು ತಂದು ಇಳಿಜಾರು ಪ್ರದೇಶದಲ್ಲಿ ಹಚ್ಚಿ ಗೇರು ಮರಗಳು ಪುಷ್ಕಲವಾಗಿ ಬೆಳೆಯುವಂತೆ ಮಾಡಿದರು. ಆ ಗೇರು ಹಣ್ಣುಗಳ ರಸವನ್ನು ಕಲ್ಲುಗಳ ಹೊಂಡದಲ್ಲಿ ಸಂಗ್ರಹಿಸಿ ಅದು ಹುಳಿಯಾದ ನಂತರ ಅಂತಿಮವಾಗಿ ಭಟ್ಟಿ ಇಳಿಸುತ್ತಿದ್ದರು. ೧೯೬೧ರಲ್ಲಿ ಗೋವಾ ಭಾರತದೊಂದಿಗೆ ವಿಲೀನಗೊಂಡ ನಂತರದಲ್ಲಿಯೂ ಪ್ರತಿಯೊಬ್ಬನೂ ಸಂಜೆ ತನ್ನ ಕೆಲಸ ಮುಗಿಸಿದ ಬಳಿಕ ರೈತರು. ಕೃಷಿ ಕಾರ್ಮಿಕರು ಆ ಗೋಡಂಬಿ ಹಣ್ಣಿನಿಂದ ತಯಾರಿಸಿದ 'ಫೆನ್ನಿ' ಎಂಬ ಮದ್ಯವನ್ನು ಸೇವಿಸಿಯೇ ಮನೆಗೆ ಹೋಗುವ ಚಟ ಹಚ್ಚಿಕೊಂಡಿತು.

ಭಾರತದಲ್ಲಿ ಬ್ರಿಟಿಷರ ಆಳಿಕೆಯ ಪೂರ್ವದಲ್ಲಿ ನೋಡಿದರೆ ಮದ್ಯಪಾನ ನಿಷೇದಕ್ಕೆ ಸಂಬಂಧಪಟ್ಟ ಸಾಕಷ್ಟು ಸಾಮಾಜಿಕ ನಿರ್ಬಂಧನೆಗಳಿದ್ದವು. ಅಷ್ಟೇ ಅಲ್ಲ ಸಿಂದಿ ಗಿಡವನ್ನು ಸಹ ಯಾರೂ ಮುಟ್ಟಬಾರದು ಎಂಬ ಭಾವನೆ ಜನರಲ್ಲಿ ತುಂಬಿಕೊಂಡಿತ್ತು. ಆದರೆ ಬ್ರಿಟಿಷರು ಭಾರತಕ್ಕೆ ಬಂದ ನಂತರವೇ ಕುಡಿತದ ಚಟವು ಜನಸಾಮಾನ್ಯರಲ್ಲಿ ವ್ಯಾಪಕವಾಗಿ ಹಬ್ಬಿತೆಂದು ಹೇಳಿದರೆ ತಪ್ಪಾಗದು. ಬ್ರಿಟಿಷರ ಉದ್ದೇಶ ಮದ್ಯ ಮಾರಾಟದಿಂದ ಹೆಚ್ಚು ಹಣ ಗಳಿಸುವುದಾಗಿತ್ತು. ಅದಕ್ಕೆ ಸೆರೆ ಮತ್ತು ಮಾದಕ ವಸ್ತುಗಳನ್ನು ಬಹಿರಂಗವಾಗಿ ಮಾರಾಟ ಮಾಡಲು ಹೊಟೆಲ್ ಮಾಲಿಕರಿಗೆ ಒಳ್ಳೆಯ ಅವಕಾಶ ಒದಗಿಸಿಕೊಟ್ಟರು. ಹೀಗಾಗಿ ಮದ್ಯಪಾನವು ಇಡೀ ರಾಷ್ಟ್ರವನ್ನೇ ಆವರಿಸಿತು. ಆಗ ಮದ್ಯವು ರೇಲ್ವೆ ಕಂಪಾರ್ಟ್‌ಮೆಂಟ್, ಕ್ಲಬ್, ಹೊಟೆಲ್ ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲಿ ದೊರೆಯಲಾರಂಭಿಸಿತು. ಹೀಗೆ ಭಾರತದಲ್ಲಿ ಇಂದು

ಮದ್ಯಪಾನವು ಒಂದು ಪ್ರಕಾರದ ಶಾಪವಾಗಿ ಸಮಾಜದ ಜನರನ್ನು ಕಾಟತೊಡಗಿದೆ.

ಸ್ವತಂತ್ರ ಭಾರತದ ಅನೇಕಾನೇಕ ಗ್ರಾಮಗಳಲ್ಲಿ ಇಂದು ಕುಡಿಯುವ ನೀರು, ತಿಂಡಿ ತಿನ್ನಲು ಒಂದು ಫಲಹಾರ ಮಂದಿರ ಇಲ್ಲದಿರಬಹುದು. ಆದರೆ ಮದ್ಯ ಮಾರಾಟ ಮಾಡುವ ಸರಾಯಿ ಅಂಗಡಿಗಳು ಮಾತ್ರ ನಮಗೆ ಎಲ್ಲೆಲ್ಲೂ ಕಾಣಸಿಕೊಳ್ಳುತ್ತಿವೆ. ಈ ಆಲ್ಕೋಹಾಲ್ ಸೇವನೆ ಕಾಳ್ಗಿಚ್ಚಿನಂತೆ ಹಳ್ಳಿ ಪಟ್ಟಣ ಎನ್ನದೆ ಎಲ್ಲೆಡೆ ಹರಡುತ್ತಿದೆ. ಹಳ್ಳಿಗಾಡಿನ, ಸಂತೆ, ಮೆರವಣಿಗೆ, ಜಾತ್ರೆ, ಮದುವೆ ಸಮಾರಂಭಗಳಲ್ಲಿ ಕೆಲವು ಸೆರೆ ಕುಡುಕರು ಇದ್ದೇ ಇರುತ್ತಾರೆ. ಮದ್ಯವು ಇಂದು ರಾಷ್ಟ್ರದ ಸಾಮಾಜಿಕ ಹಾಗೂ ಆರ್ಥಿಕ ಮತ್ತು ನೈತಿಕ ಬದುಕಿನಲ್ಲಿ ಹಾಸುಹೊಕ್ಕಾಗಿ ಸೇರಿ ಕೊಂಡಿದೆ.

೩ ಕುಡಿತವು ಒಂದು ಸಾಮಾಜಿಕ ಸಮಸ್ಯೆ

"Knowledge without character is like a Flower without Fragrance' ಎಂದು ಅತೀ ಬುದ್ಧಿವಂತ ಮನುಷ್ಯರಿದ್ದು ಅವರ ನಡತೆ ಸರಿಯಿಲ್ಲದಿದ್ದರೆ, ದುರ್ಗುಣ ದುರ್ವ್ಯಸನಗಳಿಂದ ತುಂಬಿದ್ದರೆ ಅವರ ಬಾಳು ಸುವಾಸನೆಯಿಲ್ಲದ ಹೂವಿನಂತಾಗುತ್ತಿದೆ. ಮನುಷ್ಯನಿಗೆ ಸದ್ಗುಣ ಒಳ್ಳೆಯ ಚಟಗಳು ಮತ್ತು ಪುಣ್ಯಕಾರ್ಯಗಳು ಸುಗಂಧ ಬೀರುವ ಹೂವುಗಳಂತೆ. ಇವುಗಳ ಸುಗಂಧ ಸುತ್ತಲೂ ಸುವಾಸನೆಯನ್ನು ಬೀರಿ ಆನಂದ ಗೊಳಿಸುತ್ತದೆ. ಆದರೆ ಕುಡುಕರು ಇದ್ದ ನಾಡು ಪಾಪದ ನಾಡು

ದುರ್ವಾಸನೆಯಿಂದ ತನ್ನ ಮತ್ತು ತನ್ನ ಸುತ್ತ ಮುತ್ತಲಿನ ಪರಿಸರವನ್ನು ಮಲಿನಗೊಳಿಸಿ ಅನಂತರ ಇಡೀ ರಾಷ್ಟ್ರವನ್ನೇ ತುಂಬಿ ಹರಡಿ ಅದರ ಅಧೋಗತಿಗೆ ಕಾರಣವಾಗಬಲ್ಲದು. ಆದಕ್ಕೆ ಸರ್ವಜ್ಞ ಕವಿಯು ಹೀಗೆ ಹೇಳುತ್ತಾನೆ:

"ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ,
ದುರ್ಜನರ ಸಂಗದೊಡನಾಟ ಬಚ್ಚಲದ
ರೊಜ್ಜಿನಂತಿಹುದು ಸರ್ವಜ್ಞ."೧

ಪ್ರಸ್ತುತ ಸಮಾಜದಲ್ಲಿ ವಿವಿಧ ಧರ್ಮಗಳು ಕುಡಿತಕ್ಕೆ ಸಾಕಷ್ಟು ಬಂಧನಗಳನ್ನು ಹಾಕಿದ್ದರೂ ಸಹ ಇದೊಂದು ವಿಶ್ವ ವ್ಯಾಪ್ತಿಯುಳ್ಳ ಸಮಸ್ಯೆಯಾಗಿದೆ. ಮನುಷ್ಯನು ಸ್ಥಿತಿವಂತನಾಗಿ ಬದುಕಬೇಕಾದರೆ ಮದ್ಯಪಾನ ಸೇವಿಸುವ ದುಷ್ಟ ಗುಣ ಹೊಂದಿರ ಬಾರದು. ಬದುಕಬೇಕಾದರೆ ಮದ್ಯ ಕುಡಿಯಲೇಬಾರದು ಎಂದು ಹೇಳಿಕೆಯುಂಟು. ಆದರೆ ನಾವು ಹೀಗೆ ಉಪದೇಶ ಮಾಡಿದರೆ ಸರಿ ಕುಡಿಯುವವರು ಅದನ್ನೂ ಬಿಡಬಹುದೆ? ಆದಕ್ಕೆ ನಮ್ಮ ಭಾರತ ದೇಶದಲ್ಲಿ ಉಪದೇಶವನ್ನು ಧಾರಾಳವಾಗಿ ಕೊಡುವಷ್ಟು ಜನ ಮತ್ತೇನು ಕೊಡಲಾರರು ಅಲ್ಲವೆ? ಈ ನಮ್ಮ ವಿಚಾರ ಒಮ್ಮೊಮ್ಮೆ ಗಾಳಿಗೋಪುರವಾಗಬಲ್ಲುದು.

ಈ ಕುಡಿತದ ಪ್ರಭಾವಕ್ಕೆ ಒಳಗಾದ ವ್ಯಕ್ತಿಯು ತನ್ನ ಮೆದುಳಿನ ಸಾಮರ್ಥ್ಯವನ್ನು ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ. ಮೊದಲು ಮನುಷ್ಯನು ಸರಾಯಿ ಕುಡಿಯುತ್ತಾನೆ, ನಂತರ ಸರಾಯಿಯು ಮನುಷ್ಯನನ್ನೇ ಕುಡಿದು ಬಿಡುತ್ತದೆ. ಇಂದು

೧ ಸರ್ವಜ್ಞನ ವಚನಗಳು

ಸಾಧಾರಣ ಬೆಲೆಯ ಸರಾಯಿಯಿಂದ ಹಿಡಿದು ಅತೀ ಶ್ರೇಷ್ಠ ಮಟ್ಟದ ಹೆಂಡ, ಸರಾಯಿ, ಬ್ರ್ಯಾಂಡಿ, ವಿಸ್ಕಿ, ಬೀರ್, ರಮ್, ಜಿನ್ ಮುಂತಾದ ಪಾನೀಯಗಳನ್ನು ಬಹು ಸಂಖ್ಯಾತರು ಸೇವಿಸುತ್ತಾರೆ. ಈ ಪಾನೀಯಗಳನ್ನು ಕುಡಿದು ಬೀದಿ, ಬೀದಿಗಳಲ್ಲಿ ಹುಚ್ಚರಂತೆ ಅತ್ತಿತ್ತ ಅಲೆದಾಡುತ್ತ, ತೂಗಾಡುತ್ತ, ಬೀಳುತ್ತ, ಏಳುತ್ತ, ಪ್ರಜ್ಞಾಹೀನರಾಗಿ ಸಮಾಜದ ಜನರಿಂದ ಹಾಸ್ಯಕ್ಕೆ ಕಾರಣರಾಗುವವರು ಬಹಳ ಜನ. ಕುಡಿತದ ಪ್ರಭಾವದಿಂದ ಕುಡುಕರು ದಾರಿಯುದ್ದಕ್ಕೂ ಜೋಲಿ ಹೊಡೆಯುತ್ತ, ಒಬ್ಬರಿಗೊಬ್ಬರು ಅವಾಚ್ಯ ಶಬ್ದಗಳಿಂದ ಬೈದಾಡುವದು, ಅನ್ಯಾಯ, ಅನೀತಿ,ಕೊಲೆ,ಸುಲಿಗೆ ಮಾಡುವದು, ಮೊದಲಾಗಿ ಮಾತನಾಡುತ್ತ, ಕೂಗಾಟ, ರೇಗಾಟ ಮಾಡುತ್ತ ಬರುವದು ಕುಡುಕರ ಕೆಲಸವಾಗಿದೆ. ಇವರನ್ನು ಕಂಡು ಜನರು ತಮ್ಮ ಮನೆಯ ಬಾಗಿಲು ಮುಚ್ಚಿಕೊಂಡರೆ ಆಶ್ಚರ್ಯವೇನಲ್ಲ.

ಈ ಕುಡಿತದಿಂದ ಮನುಷ್ಯ ಮಂಗನಂತೆ ಅಮಲೇರಿಸಿಕೊಳ್ಳುತ್ತಾನೆ. 'ಇಂಗು ತಿಂದ ಮಂಗನಂತೆ' ಬುದ್ಧಿ ಸ್ವಾಧೀನ ತಪ್ಪಿಸಿಕೊಳ್ಳುತ್ತಾನೆ. ಇವರನ್ನು ಕಂಡು ಎಷ್ಟು ಸಜ್ಜನರಿಗೆ ಅಸಹ್ಯವಾಗಲಿಕ್ಕಿಲ್ಲ, ನಗು ಬರಲಿಕ್ಕಿಲ್ಲ. ಅದಕ್ಕೆ ಇಂತಹ ಕುಡುಕರನ್ನು ಯಾರೂ ನಂಬುವದಿಲ್ಲ. ಇವರನ್ನು 'ನಿಶೇದಾಗ ಮಾತು ಕಿಸೇದಾಗ ಇಲ್ಲ' ಎಂದು ಹೀಯಾಳಿಸುವರು. ಮದ್ಯವನ್ನು ಸೇವಿಸಬಾರದು ಎಂದು ಹಿರಿಯರು, ಡಾಕ್ಟರರೂ ಕೂಡ ಉಪದೇಶ ಮಾಡುತ್ತ ಬಂದಿದ್ದಾರೆ. ಆದರೂ ಮದಾಂಧರಾದ ಜನರು ತಿಳುವಳಿಕೆಯಿಲ್ಲದೆ ಇನ್ನೂ ಕುಡಿಯುತ್ತಲೇ ಇದ್ದಾರೆ. ಎಲ್ಲಿಯವರೆಗೆ ಮನಸ್ಸನ್ನು ಬಿಗಿ ಹಿಡಿಯುವ ಶಕ್ತಿ ಬರುವದಿಲ್ಲವೋ

ಅಲ್ಲಿಯ ವರೆಗೆ ಇಂತಹ ಅನಾಹುತಗಳು ನಡೆದೆ ಇರುತ್ತವೆ. ಹೀಗೆ ಮದ್ಯಪಾನವು ಒಂದು ಸಾಮಾಜಿಕ ಸಮಸ್ಯೆಯಾಗಿ, ಸಮಾಜಕ್ಕೆ ಕಂಟಕವಾಗಿದೆ.

ಇಂದಿನ ವೈಜ್ಞಾನಿಕ ಮತ್ತು ತಾಂತ್ರಿಕ ಬೆಳವಣಿಗೆಯಲ್ಲಿ ಮುಂದುವರೆದ ಜನ ಉತ್ತೇಜಕ ಪೇಯಗಳಾದ ಚಹಾ, ಕಾಫಿಗಳ ಬದಲು ಮದ್ಯಪಾನೀಯಗಳಾದ ಬೀರ್, ಬ್ರ್ಯಾಂದಿ ಇವುಗಳನ್ನೇ ಸೇವಿಸುವರೋ ಎಂಬ ಬಗ್ಗೆ ಅನುಮಾನವಿದೆ. ಭೋಜನ ಕೂಟ, ನೈಟ್‌ಕ್ಲಬ್, ಮನರಂಜನೆ, ನೃತ್ಯ, ಸಂಗೀತ, ಸಮಾರಾಧನೆ, ಸಂತೋಷಕೂಟ ಇವುಗಳಲ್ಲಿ ಕಂಡುಬರುವ ಸುರಾಪಾನ, ಆಧುನಿಕ ಸಮಾಜದಲ್ಲಿ ಒಂದು ಶಿಷ್ಟಾಚಾರವಾಗಿದೆ. ಮದ್ಯವಿಲ್ಲದೆ ಯಾವುದೇ ಕೂಟ 'ಸಪ್ಪೆ' ಎನ್ನಿಸಿದೆ. ಆದರೆ "ಗುಂಡಿನ ಮತ್ತು ಗಮ್ಮತ್ತು ಆದರೆ ಆಪತ್ತು".

೪ ಕುಡುಕರಲ್ಲಿ ವಿವಿಧ ವರ್ಗಗಳು

ಸಾಮಾನ್ಯವಾಗಿ ಸೆರೆ ಕುಡಿಯುವವರಲ್ಲಿ ನಾವು ಮೂರು ವರ್ಗಗಳಾಗಿ ವರ್ಗೀಕರಿಸಬಹುದು.

೧) ಸಾಮಾಜಿಕ ಮದ್ಯಪಾನಿಗಳು : ಇವರು ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ ಮಾತ್ರ ಸಾಮಾಜಿಕ ಸಂಪ್ರದಾಯ ಮತ್ತು ರೂಢಿಗಳಿಗನುಸಾರವಾಗಿ ತಮ್ಮ ಗೆಳೆಯರೊಂದಿಗೆ ಸಂತೋಷವನ್ನು ಹಂಚಿಕೊಳ್ಳಲು ಕುಡಿಯುತ್ತಾರೆ.

ಒಬ್ಬ ಗೆಳೆಯ ಚಿನ್ನದ ಪದಕವನ್ನು ಗೆದ್ದರೆ, ಮತ್ತು ಗೆಳೆಯನ ಲಗ್ನದಲ್ಲಿ, ಪ್ರೇಮ ವಿವಾಹ, ಗಂಡು ಮಗುವಿಗೆ ಜನನ, ಜಾತ್ರೆ, ಸಾಮಾಜಿಕ ಭೋಜನಕೂಟ, ಈ ವೇಳೆಯಲ್ಲಿ ತಮ್ಮ ಸಂತೋಷವನ್ನು ಹಂಚಿಕೊಳ್ಳುವದಕ್ಕಾಗಿ ಕುಡಿಯುವ ವ್ಯವಸ್ಥೆ ಏರ್ಪಡಿಸಬಹುದು ಈ ಸಮಯದಲ್ಲಿ "ಅ" ಎಂಬ ಒಬ್ಬ ಗೆಳೆಯ ಬಹಳ ಒಳ್ಳೆಯವ, ಎಂದೂ ಕುಡಿತ ಮಾಡಿದವನಲ್ಲ. ಅತೀ ಚಿಕ್ಕ ವಯಸ್ಸಿನವ ತನ್ನ ಗೆಳೆಯರ ಒತ್ತಾಯಕ್ಕೆ ಮಣಿದು ಮೊದಲ ಸಲ ಮದ್ಯದ ರುಚಿ ನೋಡಿದನು. ಇವರು ಸಾಮಾಜಿಕ ಮದ್ಯಪಾನಿಗಳು. ಇವರನ್ನೂ ಮಿತಪಾನಿಗಳು ಇಲ್ಲವೆ ಸಂಪ್ರದಾಯಿಕ ಕುಡುಕರೆಂದೂ ಕರೆಯಬಹುದು.

೨) ಎರಡನೆಯ ವರ್ಗದ ಮದ್ಯಪಾನಿಗಳನ್ನು ಕುಡುಕರು ಎಂದು ಕರೆಯುವರು:—ಈ ವರ್ಗದ ಕುಡುಕರು ಮೊದಲು ಮೋಜಿಗಾಗಿ ಬಹಳಷ್ಟು ಮದ್ಯ ಸೇವಿಸಿ ಅದರಲ್ಲಿಯೇ ಕಾಲಹರಣ ಮಾಡುವುದು. ಕೆಲವೊಮ್ಮೆ ಇವರ ಕುಡಿತ ಮಿತಿಮೀರಿ ಸ್ಮೃತಿ ತಪ್ಪುವದು ಉಂಟು. ಯಾವದೇ ಒಂದು ಸಂತೋಷದ ಸಂದರ್ಭದಲ್ಲಿ ಎಲ್ಲ ಗೆಳೆಯರು ಸೇರಿ ಕುಡಿಯಲುಬಹುದು. ಮೇಲೆ ಹೇಳಿದಂತೆ "ಅ" ಎಂಬ ಗೆಳೆಯ ತನ್ನ ಉಳಿದ ಎಲ್ಲ ಗೆಳೆಯರ ಒತ್ತಾಯಕ್ಕೆ ಮಣಿದು ಮೊದಲಿಗಿಂತ ಹೆಚ್ಚಾಗಿ ಕುಡಿದರೆ ಅವನು ಸಂಪೂರ್ಣ ಪ್ರಜ್ಞಾಹೀನವಾಗಿ ಬಿಡುವನು. ಆ ದಿನ ಪುನಃ ಪುನಃ ರುಚಿ ನೋಡಲು ಹೊಸಬರು ಬಾಟ್ಲಿಗೆ ಬಾಯಿ ಹಚ್ಚಿದರೆ, ಇವರಿಗೆ ಎರಡನೆಯ ವರ್ಗದ ಕುಡುಕರು ಎಂದು ಕರೆಯಬಹುದು. ಇದರಿಂದ ಪಡುವ ಸಂಕಟದ ನಿವಾರಣೆಗಾಗಿ ಬಹುಶಃ ಅವರು ಮರುದಿನ ಕುಡಿಯುವದೇ ಇಲ್ಲ.

೩) ಮೂರನೆಯ ವರ್ಗದ ಮದ್ಯಪಾನಿಗಳನ್ನು ಅಮಲು ರೋಗಿಗಳು ಎಂದು ಕರೆಯುವರು :—ಅಮಲಿನ ದೀರ್ಘಕಾಲದ ವಿಪರೀತ ಬಳಕೆಯ ದುರುಪಯೋಗದಿಂದಾಗಿ ಅಮಲುಕೋರುತನ ಎಂಬ ವಿಷಮ ರೋಗವನ್ನು ತಾನೇ ಬರಮಾಡಿಕೊಳ್ಳುವರು. ಇವರಿಗೆ ಅಮಲುರೋಗಿಗಳೆಂದು ಹೆಸರು ಒಂದು ವೇಳೆ ಎರಡನೆಯ ವರ್ಗದ ಕುಡುಕರು ಪದೇ ಪದೇ ಮದ್ಯ ಸೇವಿಸಿದರೆ ಅವರೂ ಸಹ ಅಮಲು ರೋಗದ ಭೀಕರ ಗಂಡಾಂತರ ಅನುಭವಿಸುವರು. ಅವರಲ್ಲಿ ಗಮನಾರ್ಹ ಮಾನಸಿಕ ಅಸ್ಥಿರತೆ. ಶಾರೀರಿಕ. ಮಾನಸಿಕ ಆರೋಗ್ಯದಲ್ಲಿ ಗಣನೀಯ ತೊಂದರೆ, ಹಣಕಾಸಿನ ಅಡಚಣೆ, ಈ ಎಲ್ಲ ಅನಾಹುತಗಳನ್ನು ತರಬಹುದು. ಈ ವಿಪರೀತ ಮದ್ಯಪಾನಿಗಳು ಪ್ರಜ್ಞಾಶೂನ್ಯರಾಗುತ್ತಾರೆ. ನಡುಕಸನ್ನಿಗೆ ಒಳಗಾಗುತ್ತಾರೆ. ಇವರೇ ಅಮಲುರೋಗಿಗಳು. "ಅ" ಎಂಬವ ಬರಬರುತ್ತ, ದಿನನಿತ್ಯ ಕುಡಿಯಲು ಪ್ರಾರಂಭಿಸಿದ ತನ್ನ ಗೆಳೆಯರಿಗೆ ಹೀಗೆ ಹೇಳುತ್ತಾನೆ. ನನಗೆ ಕುಡಿಯುವವರ ಮೇಲೆ ಪೂರ್ಣ ಹತೋಟಿ ಇದೆ. ಮಿತವ್ಯಯದಿಂದ ಕುಡಿಯುವೆ ಎಂದ ಆತ.

ಆತನಿಗೆ 'ಹೊಟ್ಟೆ ನೋವು' ಪ್ರಾರಂಭವಾಯಿತು. ವಿಪರೀತ ಕುಡುಕನಾಗಿ ಬಿಟ್ಟ. ಈತನು ಪೂರ್ಣ ಗುಂಗಿನಲ್ಲಿ ಉಳಿಯ ತೊಡಗಿದ. ಭಯಾನಕವಾದ ಕನಸುಗಳು ಬೀಳತೊಡಗಿದವು. ನಿದ್ದೆ ಮಾಡಲೆಂದು ಮಲಗಿದ ಸ್ವಲ್ಪ ಹೊತ್ತಿನಲ್ಲಿ ಕೆಟ್ಟ ಕನಸೊಂದರಿಂದ ಹೆದರಿ ಎಚ್ಚರವಾಗುತ್ತಿತ್ತು. ಇವನ ಕೈಕಾಲು ಕಟ್ಟಿ ಮಾನಸಿಕ ಆಸ್ಪತ್ರೆಗೆ ತರಲಾಯಿತು. ಕೊನೆಗೆ ಡಾಕ್ಟರರು ಹೇಳಿದರು

ಕುಡಿತ ಮಿತಿಮೀರಿದಾಗ ಪ್ರಜ್ಞೆ ತಪ್ಪುವದು, ನಂತರ ನಡುಕ-ಸನ್ನಿ ಬರುವದು. ಕ್ರಮೇಣ ವ್ಯಕ್ತಿ ಭ್ರಮಾಧೀನನಾಗುತ್ತಾನೆ.[೧]

ಈ ಅತೀ ಹೆಚ್ಚಿನ ಕುಡುಕರು ಮದ್ಯವನ್ನು ಸೇವಿಸುವದರಿಂದ ನರಗಳಲ್ಲಿ ದೌರ್ಬಲ್ಯವುಂಟಾಗಿ ಅವರ ಆರೋಗ್ಯ ಕೆಡುತ್ತದೆ. ಅನೇಕ ರೋಗಗಳಿಗೆ ತುತ್ತಾಗಿ ಅಂದರೆ ಮಿತಿ ಮೀರಿ ಮದ್ಯ ಸೇವಿಸುವದರಿಂದ ಶರೀರದ ಹೊರಪೈ, ನರಮಂಡಲ, ಮೆದುಳು, ಯಕೃತ್ತು, ಜೀರ್ಣಾಂಗಗಳ ಮೇಲೆ ಪರಿಣಾಮ ಅಲ್ಲದೆ ನೈಸರ್ಗಿಕ ಕ್ರಿಯೆಗಳನ್ನು ಅಸ್ತವ್ಯಸ್ತಗೊಳಿಸುತ್ತದೆ. ಹೀಗೆ ಸಂಧಿವಾತ, ಕ್ಯಾನ್ಸರ, ಚಿತ್ತಭ್ರಮೆ, ಇತ್ಯಾದಿ ರೋಗಗಳಿಗೆ ಕಾರಣವಾಗ ಬೇಕಾಗುವದು.

ಮದ್ಯವನ್ನು ಸ್ವಲ್ಪ ಪ್ರಮಾಣದಲ್ಲಿ ಸೇವಿಸಿದರೆ ಇದರಿಂದ ಜನರು ಮದೋನ್ಮತ್ತರಾಗಬಹುದು. ಒಂದು ಸಲ ರೋಗಿಗಳಿಗೆ ಅಲ್ಪ ಪ್ರಮಾಣದಲ್ಲಿ ಮದ್ಯವನ್ನು ಒದಗಿಸಿದರೆ ಅವರು ರೋಗದಿಂದ ನರಳುತ್ತಿರುವ ಸಮಯದಲ್ಲಿ ಸ್ವಲ್ಪ ಶಾಂತ ಚಿತ್ತದಿಂದ ವಿಶ್ರಾಂತಿ ಪಡೆಯಲುಬಹುದು. ಆದರೆ ಯಾವ ಡಾಕ್ಟರರು ರೋಗಿಗಳಿಗೆ ಸೆರೆ, ಸಿಂದಿ ಕುಡಿಯಲು ಉಪದೇಶ ಮಾಡುವದಿಲ್ಲ. ಇದೊಂದು ತಪ್ಪು ಕಲ್ಪನೆ. ಸೆರೆ ಕುಡಿಯುವದರಿಂದ ಮೊದಲು ಮಾನ ನಾಶ ನಂತರ ಗುಣಗಳ ನಾಶ, ಕಟ್ಟಕಡೆಗೆ ಪ್ರಾಣಕ್ಕೆ ಅಪಾಯ ಒದಗುವದು. ಹೀಗೆ ಮದ್ಯಪಾನಿಗಳಲ್ಲಿ ವಿವಿಧ ವರ್ಗಗಳನ್ನು ಮಾಡಬಹುದು.[೨]

---

೧ ತರಂಗ ವಾರಪತ್ರಿಕೆ. ದಿನಾಂಕ ೧೧-೧೧-೯೮೪

೨ ಸುದ್ದಿ ಸಂಗಾತಿ ವಾರಪತ್ರಿಕೆ. ದಿನಾಂಕ ೧೧-೧-೯೮೬

೫ ಕುಡಿತಕ್ಕೆ ಬಲಿಯಾಗುತ್ತಿರುವ ತರುಣರು

ನಮ್ಮ ದೇಶದಲ್ಲಿ ಮದ್ಯಪಾನಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಏರುತ್ತಿದೆ. ನಗರದಲ್ಲಿ, ಹಳ್ಳಿಗಳಲ್ಲಿ ಸಿನೇಮಾ, ಹೊಟೇಲ್, ಬಾರ್‌ಗಳಲ್ಲಿ ನೋಡಿದಾಗ ಹೆಚ್ಚಾಗಿ ಯುವಕರನ್ನೇ ಕಾಣಬಹುದು. ಆಗೊಮ್ಮೆ, ಈಗೊಮ್ಮೆ ಸ್ವಲ್ಪ ಸ್ವಲ್ಪ ಕುಡಿಯುತ್ತ ಕೊನೆಗೆ ಪೂರ್ತಿಯಾಗಿ ಕುಡುಕರಾಗಿ ಬಿಡುವರು. ಇಂದು ಅನೇಕ ಯುವಕ, ಯುವತಿಯರು ದೊಡ್ಡ ಪಟ್ಟಣ ಮತ್ತು ಶಹರಗಳಲ್ಲಿ ಇರುವವರಿಗೆ ಮನಸ್ಸಿಗೆ ಏನೋ ಒಂದು ಆಲ್ಹಾದಕರ (ಮಜಾ) ವಸ್ತು ಎಂದು ಕುಡಿಯುವ ಹವ್ಯಾಸದಲ್ಲಿ ತೊಡಗಿದ್ದುದನ್ನು ಕಾಣಬಹುದು. ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಕುಡಿಯುವದೊಂದು ವಾಡಿಕೆಯಾಗಿದೆ. ಉದಾಹರಣೆಗೆ ಗೆಳೆಯನ ಲಗ್ನದಲ್ಲಿ, ಗಂಡು ಮಗು ಹುಟ್ಟಿದರೆ, ಒಬ್ಬ ವಿದ್ಯಾರ್ಥಿ ಪರೀಕ್ಷೆಯಲ್ಲಿ ಪಾಸಾದರೆ, ಆಯಾ ಕ್ರೀಡೆಗಳಲ್ಲಿ ಚಿನ್ನದ ಪದಕವನ್ನು ಗಳಿಸಿದರೆ, ಕಾಲೇಜಿನಲ್ಲಿ ನಡೆದ ಚುನಾವಣೆಯಲ್ಲಿ ಗೆದ್ದರೆ, ನೌಕರಿ ಸಿಕ್ಕರೆ ಸಾಮಾನ್ಯವಾಗಿ ಪಾರ್ಟಿಯ ಮೇಲೆ ಪಾರ್ಟಿ ನಡೆಯುವವು ಇವರ ಮಧ್ಯದಲ್ಲಿ ಯಾವ ಗೆಳೆಯನು ಮನಸಾರೆ ಕುಡಿಯಲು ಬಯಸುವದಿಲ್ಲವೋ ಅವನು 'ಅನಾಗರಿಕ' ಎಂದು ಹೀಯಾಳಿಸಿಕೊಳ್ಳುವನು. ಇದು ಟಾನಿಕ್ ಇದ್ದ ಹಾಗೆ 'ಬೇಡ ಬೇಡ' ಎಂದು ಅನ್ನಬೇಡ. ಈ ಬೀರ್ ಕುಡಿ. ಇದನ್ನು ಕುಡಿಯುವದರಿಂದ ನಿನ್ನ ಸಂಪ್ರದಾಯಕ್ಕೆ ಯಾವ ಅಡ್ಡಿಯಾಗುವದಿಲ್ಲ. ಕಮಾನ್ ಬೇಡ ಅನ್ನಬೇಡ. ಇದರಿಂದ ನಿಶೆ ಬರೋದಿಲ್ಲ.

ಮನಸ್ಸಿಗೆ ಖುಷಿ ಶರೀರಕ್ಕೆ ಕಾಂತಿಯನ್ನು ಕೊಡೋ ಪಾನೀಯ ಇದು.[೧]

“ಟಲ್ಲಿ ಸ್ಕೂಲ ಆಫ್ ಸೋಸಿಯಲ್ ವರ್ಕ್ಸ್” ಸಂಸ್ಥೆಯು ಕೈಕೊಂಡ ಸರ್ವೆಯ ಪ್ರಕಾರ, ಶೇಕಡಾ ೬೦ ರಷ್ಟು ಶಹರದ ವಿದ್ಯಾರ್ಥಿಗಳು ಸೆರೆ, ಗಾಂಜಾ, ಚರಸ್ ಅಫೀಮು ಮುಂತಾದ ಮಾದಕ ವಸ್ತುಗಳಿಗೆ ಅಂಟಿಕೊಂಡಿದ್ದು ಕಂಡು ಬರುತ್ತದೆ. ಅವುಗಳಲ್ಲಿ ಸೆರೆಯ ಪ್ರಮಾಣವೇ ಎಲ್ಲಕ್ಕೂ ಹೆಚ್ಚು.

ಇಂದು ನವದೆಹಲಿಯಲ್ಲಿ ವೈದ್ಯರು, ಮತ್ತು ಮನಶ್ಶಾಸ್ತ್ರಜ್ಞರು ಕೂಡಿಕೊಂಡು ಇಂದಿನ ಯುವ ಜನಾಂಗ ಮದ್ಯ ಹಾಗೂ ಮಾದಕ ವಸ್ತುಗಳ ಚಟಕ್ಕೆ ಬಲಿಯಾಗುತ್ತಿರುವ ಬಗ್ಗೆ ಒಂದು ಅಧ್ಯಯನ ಸಮೀಕ್ಷೆ ನಡೆಸಿದಾಗ ತಿಳಿದು ಬರುವ ಸಂಗತಿಯೆಂದರೆ ೬೦ ಯುವಕರನ್ನು ಪರೀಕ್ಷಿಸಿದಾಗ ೪೦ ಯುವಕರು ಅದೇ ಶಹರದಲ್ಲಿ ಈ ಚಟದಿಂದ ಪಾರಾಗದಷ್ಟು ಮದ್ಯಸೇವನೆಗೆ ಅಂಟಿಕೊಂಡಿದ್ದಾರೆ, ಎಂದು ನಿರ್ಣಯಕ್ಕೆ ಬಂದದ್ದು ಕಂಡು ಬಂದಿದೆ. ಅದರಲ್ಲಿ ಕೆಲವರು ತಿಂಗಳಿಗೆ ೮೦೦ ರೂಪಾಯಿಂದ ೧೦೦೦ ರೂ. ಪಗಾರ ತೆಗೆದುಕೊಂಡು ಆ ಸಂಬಳ ತನ್ನ ಕುಟುಂಬಕ್ಕೆ ಅತ್ಯವಶ್ಯ ಎಂದು ಗೊತ್ತಿದ್ದರೂ ಸಹ ಎಲ್ಲ ಹಣವನ್ನು ಮದ್ಯ ಹಾಗೂ ಮಾದಕ ವಸ್ತುಗಳಿಗೆ ಧಾರೆಯೆರೆಯುತ್ತಾರೆ.

ಕೆಲವು ನಿರುದ್ಯೋಗಿ ಯುವಕರು ಕಳ್ಳ ಸೆರೆ ಸಾಗಾಟದ ವಾಹಕರಾಗುತ್ತಾರಲ್ಲದೇ, ಕಪ್ಪು ಹಣ ಹೊಂದಿದ ಶ್ರೀಮಂತರಿಗೆ ಕಳ್ಳ ಸಾಗಾಟದಲ್ಲಿ ಸಹಕರಿಸುತ್ತಾರೆ.[೨]

೧ ಸುದ್ದಿ ಸಂಗಾತಿ. ಡಾ. ಸಿ. ಆರ್. ಚಂದ್ರಶೇಖರ ಜನೇವರಿ ೧೯೮೬
೨ ಕನ್ನಡಮ್ಮ ದಿನ ಪತ್ರಿಕೆ. ದಿನಾಂಕ ೨೮-೧೧-೧೯೮೬.

ನಮ್ಮ ಭಾರತದಲ್ಲಿ ಮದ್ಯ ಸೇವನೆ, ಮಾದಕ ವಸ್ತುಗಳ ಚಟಬಿಡಿಸುವ ಯಾವ ದವಾಖಾನೆಗಳು ಹುಟ್ಟಿಕೊಂಡಿಲ್ಲ. ಯಾವ ಔಷಧೋಪಚಾರದಿಂದ ಈ ಕುಡಿತವನ್ನು ಕಡಿಮೆ ಮಾಡಲು ಬರುವಂತಿಲ್ಲ. ಹೀಗೆಂದ ಮೇಲೆ ಈ ನಿಟ್ಟಿನಲ್ಲಿ ಯುವಕರ ಕುಟುಂಬದವರು ಹೆಚ್ಚು ಜವಾಬ್ದಾರಿ ವಹಿಸಬೇಕು. ಆದರೆ ಮಾತ್ರ ಯುವಕರನ್ನು ಕುಡಿತದಿಂದ ಪಾರು ಮಾಡಲು ಬರುವದು. ಭಾರತ ಎಷ್ಟೋ ಹಳ್ಳಿಗಳಿಂದ ತುಂಬಿದ ದೇಶವಾಗಿದೆ. ಹಳ್ಳಿಗಳಲ್ಲಿ ಇದ್ದ ವಿದ್ಯಾರ್ಥಿಗಳು ಅವರು ಕಾಲೇಜಿನಲ್ಲಿಯೇ ಓದಲಿ, ಇಲ್ಲವೆ ವಿಶ್ವವಿದ್ಯಾಲಯಗಳಲ್ಲಿಯೇ ಓದಲಿ ಇವರನ್ನು ಪರೀಕ್ಷಿಸಿದರೆ ಕುಡಿತದ ಪ್ರಮಾಣ ತೀರ ಕಡಿಮೆ; ಇದಕ್ಕೆ ಕಾರಣ ಬಡತನ, ಸಂಸ್ಕೃತಿ, ನೈತಿಕತೆ, ಒಳ್ಳೆಯ ಸಂಪ್ರದಾಯ, ತಂದೆ-ತಾಯಿ, ಬಳಗದವರು ತಮ್ಮ ಮಕ್ಕಳ ದುಷ್ಟ ಚಟದ ಬಗ್ಗೆ ವಹಿಸುವ ಎಚ್ಚರಿಕೆ. ಆದರೆ ನನ್ನ ವಿಚಾರದ ಪ್ರಕಾರ ಅತೀ ದೊಡ್ಡ ನಗರ ಪ್ರದೇಶದಲ್ಲಿ ವಾಸಿಸುವ ಯುವಕರು ಯಾರ ನಿಯಂತ್ರಣದಲ್ಲಿ ಉಳಿಯದೇ ಸ್ವೇಚ್ಛಾಚಾರಿಯಾಗಿ ಇಂಥ ದುಶ್ಚಟಕ್ಕೆ ಅಂಟಿಕೊಳ್ಳುತ್ತಾರೆ.

ಇಂದು 'ಭಾಂಗ'ವೆಂಬ ಮಾದಕ ದ್ರವ್ಯ ಒಂದು ಪ್ರಕಾರದ ಮೋಜಿನ ಚಟವಾಗಿ ಪರಿಣಮಿಸುತ್ತಿದೆ. ಭಾರತದ ಅನೇಕ ಭಾಗಗಳಲ್ಲಿ ವಾಸಿಸುವ ಶ್ರೀಮಂತ ವರ್ಗದವರು ಹೆಚ್ಚಾಗಿ ಈ ಭಾಂಗ ಚಟಕ್ಕೆ ಮೊರೆಹೋಗಿದ್ದಾರೆ. ಭಾಂಗವೆಂದರೆ ಒಣಗಿದ ಹೆಂಪ್ ಗಿಡದ ಎಲೆ. ಇದರ ಎಲೆ ತೇದು ರಸಮಾಡಿ ಸಕ್ಕರೆ ಪಾಕದಲ್ಲಿ ಕೂಡಿಸಿದರೆ ಒಳ್ಳೆಯ ರುಚಿ ಸಿಗುತ್ತದೆ. ಇಂದಿನ

ಉತ್ತರ ಭಾರತದ ಕೆಲವೊಂದು ಪಟ್ಟಣಗಳಲ್ಲಿ ಯುವಕರು ಹಬ್ಬ, ಹರಿದಿನಗಳಲ್ಲಿ ಹೆಚ್ಚಾಗಿ ಸಿಹಿ ತಿಂಡಿಯನ್ನು ತಿನ್ನುವಲ್ಲಿ ಇದನ್ನು ಉಪಯೋಗಿಸುತ್ತಿರುವದು ಕಂಡು ಬರುತ್ತದೆ.

ಇಂದು ವೈದ್ಯರು, ಸಮಾಜ ಸೇವಕರು, ಶಿಕ್ಷಕರು, ರಾಜಕಾರಣಿಗಳು, ಮನಶ್ಶಾಸ್ತ್ರಜ್ಞರು ಯುವಕರ ಈ ದುಷ್ಟ ಚಟಗಳ ಕಡೆಗೆ ಲಕ್ಷ್ಯವಹಿಸಬೇಕು. ಇಲ್ಲದಿದ್ದರೆ ಯುವಕರ ಪ್ರತಿಭೆ ಹಾಳಾಗುವದು ಖಂಡಿತ. ಇಂದಿನ ಯುವಕರಲ್ಲಿ ಅತೀ ಜನಪ್ರಿಯವಾದ ಮಾದಕ ವಸ್ತುಗಳೆಂದರೆ ಚರಸ್, ಗಾಂಜಾ, ಓಪಿಯಂ, ಭಾಂಗ್, ಹೆರಾಯಿನ್, ಮಾರ್ಫೀನ್, ಮಿಥಡಾನ್, ಹಷೀಶ್, ಮಾಜುವಾನ್, ಪೆನಸೈಕ್ಲಿಡಿನ್, ಮೆಸ್ಕಾಲಿನ್, ವೈನ್ ಇತ್ಯಾದಿ.[3]

೬ ಮದ್ಯದಿಂದ ದೊರೆಯುವ ಆದಾಯ

ಮದ್ಯವನ್ನು ಕುಡಿಯುವವರಿಗೂ ಮತ್ತು ಮದ್ಯಸಾರವುಳ್ಳ ಪಾನೀಯಗಳ ಉತ್ಪಾದನೆಯ ಪರಿಕೆಗೂ ನೇರ ಸಂಬಂಧವಿದೆ. ರಾಷ್ಟ್ರದಲ್ಲಿ ಮದ್ಯಪಾನ ಪ್ರತಿಬಂಧ ತಂದೆಡೆಯಲ್ಲಿ ಅದೂ ಅಯಶಸ್ವಿಯಾಗಿದೆ. ಇದಲ್ಲದೆ ರಾಜ್ಯಗಳು ತಮಗೆ ಬರಬಹುದಾದ ಆದಾಯವನ್ನು ಸಹ ಕಳೆದುಕೊಳ್ಳುತ್ತವೆ. ಪ್ರತಿ ವರ್ಷ ೬00 ಕೋಟಿ ರೂಪಾಯಿ ಆದಾಯವನ್ನು ರಾಜ್ಯಗಳು ಕಳೆದುಕೊಳ್ಳುತ್ತವೆ ಎಂದು ಸಮೀಕ್ಷೆಗಳಿಂದ ತಿಳಿದು ಬಂದಿದೆ. ಪಾನಪ್ರತಿಬಂಧವನ್ನು

3 H. B. Mali. 'Indian Social Dis organisation'

ಕಾರ್ಯಗತ ಮಾಡುವದಕ್ಕೆ ರಾಜ್ಯಗಳು ೫೦೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತವೆ. ಅಬಕಾರಿ ಸುಂಕ ಹೆಚ್ಚಿದಂತೆ ಕಳ್ಳಭಟ್ಟಿ ಸೆರೆ ತಯಾರಿಕೆ ಹೆಚ್ಚಿ, ಸಾಮೂಹಿಕ ಮರಣಕ್ಕೆ ಕಾರಣವಾಗುವದು. ಇದೊಂದು ವಿಷ ವರ್ತುಲವಾಗಿದೆ.

ಭಾರತದಲ್ಲಿ ೧೯೭೯ ರಿಂದ ೧೯೮೩ ರ ಅವಧಿಯಲ್ಲಿ ೪೫೦ ಕೋಟಿ ರೂಪಾಯಿಯಿಂದ ೯೫೦ ಕೋಟಿ ರೂಪಾಯಿಗಳ ವರೆಗೆ ಲಾಭವಾಗಿದೆ. ೧೯೭೮ ರಲ್ಲಿ ಕಚ್ಚಾ ಅಲ್ಕೊಹಾಲಿಗೆ ಇದ್ದ ಬೇಡಿಕೆ ೨೫೮ ಮಿಲಿ ಲೀಟರುಗಳಾದರೆ, ೧೯೮೩-೮೪ ರಲ್ಲಿ ಇದು ೩೫೦.೧೪ ಮಿಲಿ ಲೀಟರಗಳಾಯಿತು. ಬ್ರಾಂಡಿ, ವ್ಹಿಸ್ಕಿ, ಜಿನ್ ಮತ್ತು ರಮ್‌ಗಳಂತಹ ಭಾರತದಲ್ಲಿ ತಯಾರಾದ ವಿದೇಶಿ ಮದ್ಯಗಳ ಒಟ್ಟು ವಾರ್ಷಿಕ ಮಾರಾಟ ೧೯೮೩ ರಲ್ಲಿ ಸುಮಾರು ೬೦೦ ಕೋಟಿ ರೂಪಾಯಿಗಳಷ್ಟಾಗಿದೆ. ಕೇವಲ ಬಿಯರ್‌ದ ವ್ಯವಹಾರವೇ ೧೫೦ ರಿಂದ ೨೦೦ ಕೋಟಿ ರೂಪಾಯಿಗಳಷ್ಟಾಗುವದು. ಸರಕಾರದ ಆಜ್ಞೆಯ ಮೇರೆಗೆ ಕಂಟ್ರಾಕ್ಟರುಗಳು ಒಂದು ವರ್ಷಕ್ಕೆ ೧೫೦೦ ಕೋಟಿ ರೂಪಾಯಿ ಮೌಲ್ಯದ ದೇಶಿ ಸರಾಯಿಯನ್ನು ಮಾರಾಟ ಮಾಡುತ್ತಾರೆ. ಇದನ್ನು ಬಿಟ್ಟು ಕಳ್ಳಭಟ್ಟಿಯಿಂದ ಸೆರೆ ತೆಗೆದು ಮಾರುವ ಕೆಲಸವಂತೂ ನಡದೇ ಇರುವದು. ಬೆಂಗಳೂರಿನ ಮದ್ಯ ತಯಾರಿಕಾ ಕಂಪನಿಯೊಂದು ಕೇವಲ ಎರಡು ಕೋಟಿ ರೂಪಾಯಿ ಬಂಡವಾಳ ತೊಡಗಿಸಿ ೨ ಕೋಟಿ ನಿವ್ವಳ ಲಾಭ ಗಳಿಸಿದರೆ ಆಶ್ಚರ್ಯವಾಗದೇ ಇರಲಾರದು. ಸಾಧಾರಣವಾಗಿ ಒಂದು ನೂರು ರೂಪಾಯಿ ಬೆಲೆಬಾಳುವ ಒಂದು ವಿಸ್ಕಿ ಬಾಟಲಿ ಮಾರಾಟದಿಂದ ಕಂಪನಿಗೆ ನಿವ್ವಳ ೫೦ ರೂಪಾಯಿ ಲಾಭ ದೊರೆಯುವದು. ಹೀಗೆಂದ ಮಾತ್ರಕ್ಕೆ ಭಾರತದಲ್ಲಿ ನೀರಿಗಿಂತ

ಸರಾಯಿಯೇ ಹೆಚ್ಚಾಗಿ ದೊರೆಯಲು ಹತ್ತಿದರೆ ಕುಡಿಯುವವರಿಗೆ ಏನು ಕೊರತೆ ![1]

ಭಾರತದ ಬಹುಭಾಗಗಳಲ್ಲಿ ಮದ್ಯಪಾನದ ವ್ಯಾಪಾರ ಭರದಿಂದ ಸಾಗಿದೆ. ಅದಕ್ಕೆ ಶುದ್ಧ ಪ್ರಮಾಣದ ಮದ್ಯ ದೊರೆಯದೇ ಕಲಬೆರಕೆ ಮದ್ಯಗಳು ಪ್ರಚಲಿತವಾಗಿವೆ. ಇವುಗಳಲ್ಲಿ ಅಲ್ಕೋಹಾಲದ ಪ್ರಮಾಣ ಹೆಚ್ಚಿಸಲು 'ಸಲ್ಫೇಟ' 'ಕಾಪರ್' 'ಬ್ಯಾಟ್ರಿ ಸೆಲ್ಸ್' 'ನವಸಾಗರ' ಮುಂತಾದವುಗಳನ್ನು ಬೆರೆಸುತ್ತಾರೆ.

ಕರ್ನಾಟಕದ ಪ್ರಮುಖ ನಗರವಾದ ಬೆಂಗಳೂರಿನಲ್ಲಿ ೧೯೮೧ ಜುಲೈ ೭ ರಂದು ವಿಷಪೂರಿತ ಮದ್ಯ ಸೇವಿಸಿ ೩೦೦ ಕ್ಕಿಂತಲೂ ಹೆಚ್ಚು ಜನರು ಮರಣ ಹೊಂದಿದ್ದನ್ನು ನೋಡಿದರೆ ಕುಡಿತದ ಸಮಸ್ಯೆ ಎಷ್ಟು ಭೀಕರವಾಗಿದೆ ಎಂಬುದು ತಿಳಿಯುತ್ತದೆ.

ತಮಿಳುನಾಡಿನಲ್ಲಿ ೧೯೭೬ ರಲ್ಲಿ ಮಿಥಿಲೇಟ ಸ್ಪಿರಿಟ್ ಸೇವಿಸಿ ೬ ಮಹಿಳೆಯರು ಸೇರಿದಂತೆ ೧೧೩ ಜನರು ಮೃತಪಟ್ಟರು. ಪಾನಪ್ರತಿಬಂಧವಿರುವ ಗುಜರಾತ ರಾಜ್ಯದಲ್ಲಿ ವಿಷಕಾರಿ ಮದ್ಯ ಸೇವನೆಯಿಂದ ೩೭ ಜನರು ನಿಧನ ಹೊಂದಿದ್ದಾರೆ ಮಧ್ಯಪ್ರದೇಶದ ಇಂದೂರಿನಲ್ಲಿ ೧೯೭೬ ರಲ್ಲಿ ೧೦೯ ಮದ್ಯಪಾನ ಮಾಡಿದ ವ್ಯಕ್ತಿಗಳು ಮರಣ ಹೊಂದಿದ್ದಾರೆ. ಮೃತಪಟ್ಟವರ ಕುಟುಂಬದ ಸದಸ್ಯರನ್ನು ಪೋಷಿಸಲು ಸರಕಾರ ೪೫.೦೦೦ ರೂಪಾಯಿಗಳನ್ನು ನೀಡಬೇಕಾಯಿತು. ಅಹಮದಾಬಾದಿನಲ್ಲಿ ಸಹ ಒಂದು ನೂರು ವ್ಯಕ್ತಿಗಳು ನಿಧನರಾಗಿದ್ದಾರೆ. ಇಂದು ಚಿಕ್ಕ ಕೇಂದ್ರ ಶಾಸಿತ ಪ್ರದೇಶ ಗೋವಾ ಮದ್ಯದ ವ್ಯಾಪಾರದಿಂದ ಒಂದು ಕೋಟಿ ರೂಪಾಯಿ

೧ ತರಂಗ ವಾರ ಪತ್ರಿಕೆ ೧೧-೧-೧೯೮೪

ಆದಾಯವನ್ನು ಗಳಿಸುತ್ತದೆ ಮತ್ತು ೫೦,೦೦೦ ಜನರು ಈ ಉದ್ಯಮದಿಂದ ಅವಲಂಬಿತರಾಗಿದ್ದಾರೆ.

ಕೆಲ ರಾಜ್ಯಗಳನ್ನು ಬಿಟ್ಟರೆ ಉಳಿದೆಲ್ಲ ರಾಜ್ಯಗಳು ಪಾನ ಪ್ರತಿಬಂಧವನ್ನು ಕೊನೆಗೊಳಿಸಿವೆ. ಈ ರಾಜ್ಯಗಳು ಇನ್ನು ಮುಂದೆ ಅಬಕಾರಿ ಸುಂಕದಿಂದ ಅತೀ ದೊಡ್ಡ ಆದಾಯ ಗಳಿಸುವದಾಗಿ ಹೇಳಿಕೊಳ್ಳುತ್ತಿವೆ. ಪಾನ ಪ್ರತಿಬಂಧ ಕಾರ್ಯಗತ ಮಾಡಿದ ತಮಿಳುನಾಡು ಇಂದು ಸುಮಾರು ೧೫,೦೦೦ ಮದ್ಯದ ಅಂಗಡಿಗಳನ್ನು ತೆರೆದಿದೆ. ಕರ್ನಾಟಕ ರಾಜ್ಯಕ್ಕೆ ೧೯೮೫-೮೬ ನೇ ಸಾಲಿನಲ್ಲಿ ೨೭೬ ಕೋಟಿ ರೂಪಾಯಿ ಆದಾಯವಾದದ್ದು ದಿನ ಪತ್ರಿಕೆಗಳಿಂದ ತಿಳಿದುಬರುತ್ತದೆ.[೧]

ಮದ್ಯಪಾನ ನಿಷೇಧ ಬಡವರಿಗೆ ಬೇಕೇ ಬೇಕು. ಜನರಿಗೆ ಬೇಕಾದ್ದು ಸರ್ಕಾರ ಮಾಡಬೇಕು. ಆದರೆ ವಿಚಿತ್ರವೆಂದರೆ ಹೆಂಡ ಸಾರಾಯಿ ಕುಡಿಸಿ ಓಟು ಗಳಿಸಿದ ಪಕ್ಷಗಳು ಅದೇ ಮದ್ಯ ಕುಡಿಸಿ ಜನರನ್ನು ದಾರಿ ತಪ್ಪಿಸಿ ಅಜ್ಞಾನಾಂಧಕಾರದಲ್ಲಿರಿಸಿ ಅಧಿಕಾರವನ್ನು ಭದ್ರವಾಗಿ ಹಿಡಿದುಕೊಂಡಿದ್ದಾರೆ. ಅಬ್ಕಾರಿ ಸುಂಕದಿಂದ ರಾಜ್ಯಕ್ಕೆ ಸಲ್ಲುವ ೨೭೬ ಕೋಟಿ ರೂಪಾಯಿಗಳನ್ನು ಇತರ ಬಾಬುಗಳಿಂದ ಕೂಡಿಸುವುದೇನೂ ಕಷ್ಟವಾಗಲಾರದು. ರಾಜ್ಯದ ಒಟ್ಟು ವರಮಾನ ೪,೪೬.೪ ಕೋಟಿ. ಅದರಲ್ಲಿ ೨೭೬ ಕೋಟಿ ತುಂಬಿಕೊಳ್ಳುವುದು ಅಸಾಧ್ಯವೇನಲ್ಲ.

---

೧ ಮತ್ತು ೨ 'ಕನ್ನಡಮ್ಮ' ದಿನಪತ್ರಿಕೆ. ದಿನಾಂಕ ೨೫-೧೧-೧೯೮೬

ಒಟ್ಟಿನಲ್ಲಿ ಹೇಳಬೇಕಾದರೆ ಇಂದು ಭಾರತೀಯರು ಮೊದಲು ಸೆರೆಯನ್ನು ಕುಡಿಯುತ್ತಿದ್ದಕ್ಕಿಂತ ಎರಡು ಪಟ್ಟು ಹೆಚ್ಚು ಕುಡಿಯುತ್ತಿದ್ದಾರೆ. ೭೫ ಕೋಟಿ ಭಾರತೀಯರಲ್ಲಿ ಮೂರು ಒಂದು ಭಾಗ ರಾಷ್ಟ್ರದಾದ್ಯಂತ ೫೦ ಕ್ಕಿಂತ ಹೆಚ್ಚಿಗೆ ಘಟಕಗಳಿಂದ ಉತ್ಪಾದಿಸಲ್ಪಡುವ ಸೆರೆಯನ್ನು ಸೇವಿಸುತ್ತಾರೆ. ಈ ಘಟಕಗಳು ಪ್ರತಿ ವರ್ಷ ೭೫ ಲಕ್ಷ ಲೀಟರ ಮದ್ಯವನ್ನು ಉತ್ಪಾದಿಸುತ್ತವೆ. ಸುಮಾರು ೧೫ ಲಕ್ಷ ಜನ ಮದ್ಯ ಉತ್ಪಾದನೆಯಲ್ಲಿ ಮತ್ತು ಅದರ ವಿತರಣೆಯಿಂದ ಜೀವನ ಸಾಗಿಸುತ್ತಾರೆ.[೨]

೭. ಮದ್ಯಪಾನೀಯಗಳಲ್ಲಿ ಅಲ್ಕೋಹಾಲದ ಪ್ರಮಾಣ

ಮದ್ಯ ತಯಾರಿಕೆಯಲ್ಲಿ ಮುಖ್ಯವಾಗಿ ಎರಡು ಬಗೆಗಳು. (೧) ಹುದುಗೇಳು (ಉಕ್ಕಿಬರುವ, ಹುಳಿಹಿಡಿಯುವ) ಮದ್ಯ ಪಾನೀಯಗಳು. ಇದರಲ್ಲಿ ವೈನ್, ಬೀರ್‌ಗಳು ಪ್ರಮುಖ. (೨) ಸಾಂದ್ರೀಭವಿಸಿ ಭಟ್ಟಿಯಿಳಿಸಿ, ತೆಗೆದ ಮದ್ಯಪಾನೀಯಗಳು. ಇದರಲ್ಲಿ ವ್ಹಿಸ್ಕಿ, ರಮ್, ಜಿನ್, ಬ್ರ್ಯಾಂಡಿ, ಇತ್ಯಾದಿಗಳು.

೧) ವೈನ್‌ನ್ನು ದ್ರಾಕ್ಷಾರಸದಿಂದ ತಯಾರಿಸಲಾಗುತ್ತದೆ. ಇದರಲ್ಲಿ ಅಲ್ಕೊಹಾಲ್ (ಅಮಲೇರಿಸುವ)ದ ಪ್ರಮಾಣ ೮ ರಿಂದ ೧೦ ರ ವರೆಗೆ ಇರುತ್ತದೆ ಇದರಲ್ಲಿ ತೀಕ್ಷ್ಣ ಮದ್ಯ ಕೂಡಿಸಿದಾಗ ಇದರ ಪ್ರಮಾಣ ೧೬ ರಿಂದ ೩೫ ರ ವರೆಗೆ ಹೆಚ್ಚಿಸಲು ಬರುತ್ತದೆ.

೧ ಮತ್ತು ೨ 'ಕನ್ನಡಮ್ಮ ದಿನಪತ್ರಿಕೆ' ದಿನಾಂಕ : ೨೮–೧೧–೧೯೮೬

೨) ಬೀರ್ : ಬೀರ್‌ನ್ನು ಬಾರ್ಲಿ ಧಾನ್ಯಗಳಿಂದ ತಯಾರಿಸುತ್ತಾರೆ. ಇದರಲ್ಲಿ ಅಲ್ಕೋಹಾಲದ ಪ್ರಮಾಣ ೩ ರಿಂದ ೮ ರ ವರೆಗೆ ಇರುತ್ತದೆ. ಇದೊಂದು ತಂಪು ಪಾನೀಯವಾದುದರಿಂದ ಜಗತ್ತಿನಾದ್ಯಂತ ಇದರ ಬೇಡಿಕೆ ಹೆಚ್ಚಿದೆ.

೩) ವ್ಹಿಸ್ಕಿ : ವ್ಹಿಸ್ಕಿಯನ್ನು ಭಟ್ಟಿಯಿಳಿಸಿ ತಯಾರಿಸುವರು. ಇದು ಸಹ ಜಗತ್ಪ್ರಸಿದ್ಧವಾಗಿದೆ. ಇದರಲ್ಲಿ ಅಲ್ಕೋಹಾಲದ ಪ್ರಮಾಣ ೪೫ ರಿಂದ ೫೦ ರ ವರೆಗೆ ಇರುವದು.

೪) ರಮ್ : ರಮ್‌ನ್ನು ಮೊಲಾಸೆಸ್ (ಮಳ್ಳಿ) ದಿಂದ ಅಂದರೆ ಹುಳಿಹಿಡಿದ ಕಾಕಂಬಿಯಿಂದ ತಯಾರಿಸುವರು. ಇದರಲ್ಲಿ ಅಲ್ಕೋಹಾಲದ ಪ್ರಮಾಣ ೪೦ ರಷ್ಟು ಇರುತ್ತದೆ.

೫) ಜಿನ್ : ಜಿನ್‌ವು ತೀಕ್ಷ್ಣ ಮದ್ಯಸಾರ. ಇದನ್ನು ಜುನಿಪರ್-ಗುಲ್ಮದಿಂದ ಸುವಾಸನೆಗೊಳಿಸುತ್ತಾರೆ.

೬) ಬ್ರ್ಯಾಂಡಿ : ಬ್ರ್ಯಾಂಡಿ ಇದನ್ನು ಸಹ ಭಟ್ಟಿ ಇಳಿಸಿ ಪಡೆಯುತ್ತಾರೆ. ಇದರ ಅಲ್ಕೋಹಾಲದ ಪ್ರಮಾಣ ಪ್ರತಿ ಶತ ೬೫ ರಿಂದ ೭೦ ರ ವರೆಗೆ ಇರುತ್ತದೆ.

ಭಾರತದಲ್ಲಿ ತಯಾರಿಸುವ ಮದ್ಯಪಾನೀಯಗಳು ಕಲಬೆರಕೆಯಾಗಿರುವುದರಿಂದ ಅಲ್ಕೋಹಾಲದ ಪ್ರಮಾಣ ೪೫ ರಿಂದ ೭೦ರ ವರೆಗೆ ಇರುವದು ಕಂಡುಬರುತ್ತದೆ. ೧೦ ಪ್ರತಿಶತಕ್ಕಿಂತ ಕಡಿಮೆ ಅಲ್ಕೋಹಾಲ ಹೊಂದಿದ ಮದ್ಯವು ರೋಗಿಗಳ ಆರೈಕೆಗೆ ಅನುಕೂಲವಾಗುವದು. ಇದಕ್ಕಿಂತ ಹೆಚ್ಚು ಪ್ರತಿಶತ ಹೊಂದಿದ ಮದ್ಯವನ್ನು ಸೇವಿಸಿದರೆ ಜೀವಕ್ಕೆ ಅಪಾಯ ತರುವದು.[1]

1 H. B. Mali–Indian Social Disorganisation.

೮ ಕುಡಿತಕ್ಕೆ ಕಾರಣಗಳು

ಮದ್ಯಪಾನ ವ್ಯಸನವುಳ್ಳವರು ಕುಡಿಯಲಿಕ್ಕೆ ಯಾವಾಗಲೂ ಕಾರಣಗಳನ್ನು ಹುಡುಕುತ್ತಿರುವರು. ನಿರಾಶೆಯಾದಾಗ ಕುಡಿಯುವರು. ಸಂತೋಷವಾದಾಗ ಕುಡಿಯುವರು. ಒಬ್ಬ ಪ್ರೇಯಸಿ ಕೈಬಿಟ್ಟಳೆಂದು ವಿರಹದಲ್ಲಿ ಕುಡಿದರೆ, ವಿದ್ಯಾರ್ಥಿಯೊಬ್ಬ ಪರೀಕ್ಷೆಯಲ್ಲಿ ಚಿನ್ನದ ಪದಕ ಪಡೆದರೆ, ಕಾಲೇಜು ಚುನಾವಣೆಯಲ್ಲಿ ಗೆದ್ದರೆ, ಇನ್ನು ಕೆಲವರು ದುಃಖ ನಿವಾರಣೆಗಾಗಿ ಕುಡಿಯುತ್ತಾರೆ. ಹೊಲ, ಗದ್ದೆಗಳಲ್ಲಿ, ಕಾರ್ಖಾನೆ, ಕೈಗಾರಿಕೆಗಳಲ್ಲಿ ದುಡಿದು ದಣಿವು ನಿವಾರಿಸಿಕೊಳ್ಳಲು ಕೆಲವರು ಕುಡಿದರೆ, ಮತ್ತೆ ಕೆಲವರು ರಾತ್ರಿ ವೇಳೆಯಲ್ಲಿ ನಿದ್ರೆ ಬರಲು ಕುಡಿಯುವರು. ಚಿಂತೆ, ಜಿಗುಪ್ಸೆ, ದುಃಖ ಆಘಾತ ಘಟನೆಗಳು ಮನುಷ್ಯನನ್ನು ಕುಡಿತಕ್ಕೆ ಕಾರಣ ಮಾಡಿ ಬಿಡುವವು. ಹೀಗೆ ಇಂದಿನ ಅನೇಕ ಶ್ರಮಜೀವಿಗಳು, ಬುದ್ಧಿ ಜೀವಿಗಳು, ಸಾಹಿತಿಗಳು, ವಕೀಲರು, ಡಾಕ್ಟರುಗಳು, ಶಿಕ್ಷಕರು, ಕಚೇರಿ ಕೆಲಸಗಾರರು ಮತ್ತು ಕೆಲವು ವಿದ್ಯಾರ್ಥಿಗಳೂ ಕೂಡ ಈ ಮದ್ಯಪಾನಕ್ಕೆ ಮೊರೆ ಹೋಗಿದ್ದಾರೆ.

ಈ ಮದ್ಯಪಾನದ ಚಟಕ್ಕೆ ಬಲಿಬೀಳುವದು ಅತಿ ಸುಲಭ ಮಾರ್ಗ, ಆದರೆ ನಾನು ಯಾವ ರೀತಿ ಕುಡುಕನಾದೆ ಎಂದು ತಿಳಿಯುವದು ಕಠಿಣ. ಕುಡುಕರು ಕುಡುಕರಾಗುವದಕ್ಕೆ ಅವರೆಷ್ಟು ಕಾರಣರೋ ಸಮಾಜವು ಅಷ್ಟೇ ಕಾರಣ. ಕುಡುಕರೆಂದರೆ 'ಕಿವಿಯಲ್ಲಿ ನೋವಿರುವ ಮಕ್ಕಳ ಹಾಗೆ'. ಹೀಗೆ ಕುಡಿತಕ್ಕೆ ನೂರಾರು ಕಾರಣಗಳೆಂದು ಹೇಳಬಹುದು.

ಮದ್ಯಪಾನದಿಂದ ಉಂಟಾಗುವ ಉದ್ರೇಕ, ಉತ್ಸಾಹ ಕ್ಷಣಿಕ, ಚಿಂತೆ ಮರೆಯುವುದು ತಾತ್ಕಾಲಿಕ. ಶ್ರಮ ಪರಿಹಾರ ಅತ್ಯಲ್ಪ, ಮದ್ಯವು ಶರೀರದಿಂದ ಬಲು ಬೇಗ ಹೊರಟು ಹೋಗು ಹೋಗುತ್ತದೆ. ಇದರ ನಿಶೆ ಇಳಿದ ನಂತರ ಮನುಷ್ಯ ಮೊದಲಿಗಿಂತ ಬಳಲಿದವನಾಗಿ, ಆತನ ಚಿಂತೆ ವ್ಯಾಕುಲತೆಗಳು ದ್ವಿಗುಣವಾಗುತ್ತವೆ. ಮೊದಲಿಗಿಂತ ಹೆಚ್ಚಿನ ಹೀನಾವಸ್ಥೆಗೆ ಬಂದು, ಬುದ್ಧಿಯೂ ಮಂದವಾಗುತ್ತದೆ. ಆಯಾಸ, ಆಲಸ್ಯಗಳು ಹೆಚ್ಚುತ್ತವೆ. ಪುನಃ ಪುನಃ ಕುಡಿಯಬೇಕು ಎಂಬ ಬಯಕೆ ಆಗುತ್ತದೆ. ಒಮ್ಮೆ ಕುಡಿತದ ಚಟಕ್ಕೆ ಅಂಟಿಕೊಂಡನೆಂದರೆ ಅದರಿಂದ ಅವನಿಗೆ ಬಿಡುಗಡೆ ಇಲ್ಲ.

ತಂದೆ ತಾಯಿಯರ ಬಿಗುವಿನಲ್ಲಿ ಬೆಳೆಯದ ಮಕ್ಕಳು ತಮ್ಮ ತಾರುಣ್ಯಾವಸ್ಥೆಗೆ ತಲುಪುವ ಮುನ್ನ ಮದ್ಯಪಾನದ ಚಟಕ್ಕೆ ಅಂಟಿಕೊಳ್ಳುವರು. ಹುಟ್ಟು ನರದೌರ್ಬಲ್ಯ, ಮೈಗಳ್ಳರು, ಆಲಸಿಗಳು, ಅಶಕ್ತರು, ತಮ್ಮ ದೌರ್ಬಲ್ಯ ಮುಚ್ಚಿಕೊಳ್ಳಲು ಕುಡುಕರಾಗುತ್ತಾರೆ. ಸಾಮಾಜಿಕ ದೃಷ್ಟಿಯಿಂದ ನೋಡಲಾಗಿ ಮಕ್ಕಳ ಬೆಳವಣಿಗೆಯ ಮೇಲೆ ಮನೆಯ ವಾತಾವರಣ ಬಹಳಷ್ಟು ಮಹತ್ವದ ಪಾತ್ರವಹಿಸುತ್ತದೆ ಒಂದು ವೇಳೆ ತಂದೆ ತಾಯಿಗಳೇ ಕುಡುಕರಾಗಿದ್ದರೆ, ಮಕ್ಕಳೂ ಕೂಡ ಆ ಅಮಲು ರೋಗಕ್ಕೆ ಬಲಿಪಶುಗಳಾಗುತ್ತಾರೆ. ಸುತ್ತಮುತ್ತಲಿನ ಪ್ರದೇಶವು ಮದ್ಯದ ಅಂಗಡಿಗಳಿಂದ ತುಂಬಿದ್ದರೆ ಕುಡಿತ ಪ್ರಾರಂಭವಾಗಬಹುದು. ಕಾರ್ಖಾನೆಗಳ ಗದ್ದಲ ಮತ್ತು ಕೊಳಚೆ ಪ್ರದೇಶದಿಂದ, ಹೊಲಸು ವಾಸನೆಯಿಂದ ಮುಕ್ತರಾಗಲು ಜನರು ಕುಡುಕರಾಗುತ್ತಾರೆ. ಭಯಂಕರ ವಾಹನಗಳ ಓಡಾಟ, ರೈಲುಗಳ ಓಡಾಟದ ಶಬ್ದ,

ಆಧುನಿಕ ನಗರೀಕರಣ ಇವುಗಳಿಂದ ಬೇಸತ್ತ ಜನ ಕುಡುಕರಾಗುತ್ತಾರೆ. ಒಬ್ಬರ ಉದ್ಯೋಗವು ಸಹ ಕುಡಿತಕ್ಕೆ ಕಾರಣ. ವ್ಯಾಪಾರದಲ್ಲಿ ಅನಿರೀಕ್ಷಿತ ಲಾಭ ಉಂಟಾದರೆ ಕುಡಿತವು ಪ್ರಾರಂಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗದೆ ಇದ್ದಾಗ ಜಿಗುಪ್ಸೆವುಂಟಾಗಿ ಕುಡಿತ ಸಾಮಾನ್ಯವಾಗಿ ಪ್ರಾರಂಭವಾಗುವದು.

ಬಡ ಕುಟುಂಬದಲ್ಲಿ ದಿನವಿಡೀ ದುಡಿದು ದುಡಿದು ನಾಲ್ಕು ರೂಪಾಯಿಗಳನ್ನು ಗಳಿಸಿ ತಂದ ಮನೆಯ ಯಜಮಾನನೇ ಕುಡಿದು ಹಾಳು ಮಾಡಿದರೆ ಅವನ ಹೆಂಡತಿ, ಮಕ್ಕಳಿಗೆ ಉಪವಾಸವಲ್ಲದೆ ಮತ್ತೇನು ಗತಿ? ಅದರಂತೆ ಕರ್ನಾಟಕ ರಾಜ್ಯದ ವಿಜಾಪೂರ ಜಿಲ್ಲೆಯಲ್ಲಿ 'ಬಬಲಾದಿ' ಎಂಬ ಗ್ರಾಮವಿರುವದು. ಅಲ್ಲಿ ಸದಾಶಿವನ ಮಠವಿದ್ದು, ಇಂದಿನ ವರೆಗೆ ಮದ್ಯವನ್ನು ಪ್ರಸಾದವೆಂದು ಸ್ವೀಕರಿಸುತ್ತಾರೆ. ಆ ದೇವಸ್ಥಾನದ ಭಕ್ತಾದಿಗಳು ಎಲ್ಲೆಲ್ಲಿ ಇದ್ದರೂ ಪರವಾಗಿಲ್ಲ ಆದರೆ ಮೊದಲಿಗೆ ತೀರ್ಥರೂಪದಲ್ಲಿ ಮದ್ಯ ಸೇವಿಸಬೇಕು, ಯಾಕೆಂದರೆ ಇದು ದೇವರ ಪ್ರಸಾದ! ಕೆಲವರು ಮದ್ಯವೆಂದರೆ ದೇವರ ಶಾಪವೆಂದು ತಿಳಿದು ಕುಡಿಯುತ್ತಾರೆ.

ಇಂದಿನ ಲಂಚ ಸಾಮ್ರಾಜ್ಯದಲ್ಲಿ ಅಧಿಕಾರಿಗಳು ಜನರಿಂದ ಲಂಚ ಸ್ವೀಕರಿಸಿ ಸಂಜೆಯ ವೇಳೆಯಲ್ಲಿ ತಮ್ಮ ಧರ್ಮಪತ್ನಿಯರನ್ನು ಒಳಗೊಂಡು ಕ್ಲಬ್, ಇಲ್ಲವೆ ಬಾರಗಳಿಗೆ ಹಾಜರಾಗುತ್ತಾರೆ. ಹೀಗೆ ನೌಕರಿ ಕೊಡಿಸಲು, ಬಡತಿ ನೀಡಲು, ಉದ್ಯೋಗ ದೊರಕಿಸಿಕೊಡಲು ಕನಿಷ್ಠ ಪಾರ್ಟಿಗಳನ್ನಾದರೂ ಕೊಡಲೇಬೇಕು ಎಂದು ಬಡವರಿಗೆ ಒತ್ತಾಯಿಸಿದರೆ ಕುಡಿತ ಇನ್ನಷ್ಟು ಹೆಚ್ಚಾದರೆ

ತಪ್ಪೇನಿಲ್ಲ. ಹೀಗೆ ಕುಡಿತದ ಕಾರಣಗಳಿಂದ ಮನುಷ್ಯನು ದೈಹಿಕ ವಿಪತ್ತಿಗೂ, ಆರ್ಥಿಕ ನಾಶಕ್ಕೂ, ಸಾಮಾಜಿಕ ಸಭ್ಯತೆಗೂ ಹಾಗೂ ಕೌಟುಂಬಿಕ ನೆಮ್ಮದಿಗೂ ಕಂಟಕನಾಗುತ್ತಾನೆ.[1]

೬ ಕುಡಿತದ ಕೆಡಕುಗಳು

ಭಾರತವು ಆರ್ಥಿಕವಾಗಿ ಹಿಂದುಳಿದ ದೇಶ. ಅದರಲ್ಲೂ ಆರ್ಥಿಕ ದೃಷ್ಟಿಯಿಂದ ಹಿಂದುಳಿದ ವರ್ಗದವರ ಪರಿಸ್ಥಿತಿ ತೀರಾ ಕೆಳಮಟ್ಟದ್ದಾಗಿದೆ. ಬಡ ಕುಟುಂಬಗಳಲ್ಲಿ ದುಡಿದು ನಾಲ್ಕು ರೂಪಾಯಿಗಳನ್ನು ಗಳಿಸಿದ ಮನೆಯ ಯಜಮಾನನೇ ಹೆಂಡ. ಸರಾಯಿ ಕುಡಿದು ಬಿಟ್ಟರೆ ಅವನ ಮನೆಯವರ ಗತಿ ಅಧೋಗತಿ! ಆತನ ಮನೆಯವರೆಲ್ಲರೂ ಮದ್ಯಪಾನದ ಶಾಪಕ್ಕೆ ಬಲಿಬೀಳ ಬೇಕಾಗುವದು. "Unwise expenditure Makes Man Poor". ಅಂದರೆ 'ಜಾಣಾಕ್ಷ್ಯತನದಿಂದ ಹಣ ಖರ್ಚು ಮಾಡ ದವನು ಯಾವಾಗಲೂ ಬಡವನಾಗುತ್ತಾನೆ' ಎಂಬಂತೆ ಕುಡುಕರು ಕಡುಬಡತನ ಅನುಭವಿಸಬೇಕಾಗುವದು. ಕುಡುಕರಿಗೆ ಅನ್ನ, ಅರಿವೆ, ಆಶ್ರಯ ಇವುಗಳಲ್ಲಿ ಸ್ವಾವಲಂಬನೆ ಸಾಗಿಸುವದು ಸಾಧ್ಯ ವಾಗಿಲ್ಲ. ಮದ್ಯಪಾನದಂಥ ದುಶ್ಚಟದಿಂದ ಬಡವರು ಮುಕ್ತ ರಾಗದಿದ್ದರೆ, ಅವರ ಬಡತನ ನಿವಾರಣೆಯಾಗದು. ಮೊದಲು ಮನುಷ್ಯ ಮದ್ಯವನ್ನು ತೆಗೆದುಕೊಳ್ಳುತ್ತಾನೆ. ಆ ಮೇಲೆ ಸೆರೆಯು ಕುಡುಕನನ್ನೇ ಕುಡಿಯುತ್ತದೆ.

---

1 Dr.-VATSYAYAN. 'Social Disorganisation'.

ಇಂತಹ ದುಷ್ಟ ಪದ್ಧತಿಯ ಮೇಲೆ ಸರಕಾರ ನಿಯಂತ್ರಣ ಚಲಾಯಿಸಬೇಕು. ಮದ್ಯಸೇವೆಯನ್ನು ಬೇರುಸಹಿತ ಕಿತ್ತು ಹಾಕದಿದ್ದರೆ ಎಂದೆಂದೂ ಬಡಜನತೆಯ ಜೀವನ ಮಟ್ಟವನ್ನು ಸುಧಾರಿಸುವುದು ಅಸಾಧ್ಯ. ಆಗ ಸರ್ವತೋಮುಖ ಅಭಿವೃದ್ಧಿಗೆ ಮದ್ಯಪಾನವೇ ಆತಂಕಕಾರಿ ಎಂದು ಹೇಳಬೇಕಾಗುವದು. ಹೀಗೆ ಮದ್ಯಪಾನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ನೈತಿಕ ಮಟ್ಟವನ್ನು ಹಾಳುಮಾಡುತ್ತದೆ. ತಜ್ಞರ ಅಭಿಪ್ರಾಯದ ಪ್ರಕಾರ 'ಮದ್ಯವು ಆಹಾರದಂತೆ ಮನುಷ್ಯನ ಶರೀರಕ್ಕೆ ಶಕ್ತಿಯನ್ನು ಕೊಡುವ ಗುಣ ಹೊಂದಿಲ್ಲ, ಅಷ್ಟೇ ಅಲ್ಲದೆ ಶರೀರಕ್ಕೆ ಭಯಂಕರ ಹಾನಿಯನ್ನುಂಟು ಮಾಡುವದಾಗಿದೆ.'

'ಲೋಕೋಕ್ತಿ' ಹೇಳಿಕೆಯಂತೆ, ಮದ್ಯಪಾನವು ಸಪ್ತವ್ಯಸನಗಳಲ್ಲಿ ಒಂದು. ವಿವಾಹ, ಇಷ್ಟದೇವತಾ ಪೂಜೆ, ಇವುಗಳಲ್ಲಿ ಮದ್ಯಪಾನ ಮಾಡಬೇಕೆಂಬ ನಿಯಮವಿತ್ತು. ಆದರೆ ಈ ಪದ್ಧತಿ ಎಂದೋ ನಿಂತು ಹೋಗಿದೆ. ಇಂದು ಕುಡುಕರು ನಿರ್ದಯಿಗಳು ಅವರು ಮಾಡದ ಪಾಪವಿಲ್ಲ ಎಂಬುದನ್ನು 'ಧರ್ಮಾಮೃತ' ಎಂಬ ಸುಭಾಷಿತ ಹೇಳುತ್ತದೆ. ದೊಡ್ಡ ದೊಡ್ಡ ಮಾನಸಿಕ ಆಸ್ಪತ್ರೆಗಳಲ್ಲಿ ಕುಡಿತದಿಂದ ಬಳಲುವ ರೋಗಿಗಳ ಸಂಖ್ಯೆ ಪ್ರತಿಶತ ೨೦ ರಿಂದ ೩೦ ಕ್ಕೇರಿದೆ. ಕಾರ್ಖಾನೆಗಳಲ್ಲಿ ಉತ್ಪಾದನೆಗೆ ಹಾನಿಯುಂಟಾಗಲು ಮತ್ತು ನಾಕಷ್ಟು ವಿವಾಹ ವಿಚ್ಛೇದನೆಗಳಿಗೆ ಈ ಮದ್ಯಪಾನವೇ ಕಾರಣವಾಗಿದೆ.

ಭಾರತ ಸಂವಿಧಾನದ, ರಾಜನೀತಿ ನಿರ್ದೇಶಕ ತತ್ವಗಳಲ್ಲಿ ಸಂವಿಧಾನದ ೪೭ ನೆಯ ವಿಧಿಯ ಪ್ರಕಾರ ಈ ಹೇಳಿಕೆ ನೀಡಿದೆ. "ಸರಕಾರವು ತನ್ನ ಪ್ರಜೆಗಳ ಆಹಾರದ ಮಟ್ಟವನ್ನು ಮತ್ತು

ಇರುವಿಕೆಯ ಮಟ್ಟವನ್ನು ಎತ್ತರಿಸುವದು ಮತ್ತು ಸಾರ್ವಜನಿಕ ಆರೋಗ್ಯವನ್ನು ಕಾಪಾಡುವದು. ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಟ ಪರಿಣಾಮ ಬೀರುವ ಮಾದಕ ವಸ್ತುಗಳನ್ನು, ಅಮಲೇರಿಸುವಂತಹ ಮದ್ಯಪಾನೀಯಗಳನ್ನು ಔಷಧ ಮತ್ತು ಟಾನಿಕ್‌ನ್ನು ಬಿಟ್ಟು ನಿತ್ಯ ಜೀವನದಲ್ಲಿ ಉಪಯೋಗಿಸದಂತೆ ಪ್ರತಿಬಂಧಕ ನಿಯಮಗಳನ್ನು ಹಾಕಬೇಕು" ಎಂದು ವಿವರಣೆ ಇದೆ. ಆದರೆ ಭಾರತೀಯ ಕುಡುಕರು ಮದ್ದೇರಿದ ಆನೆಗಳಿದ್ದಂತೆ. ಮದ್ಯದಿಂದ ಅನಾಹುತವಾದರೂ ಅಷ್ಟೇ, ಕುಡಿದು ಕುಡಿದು ಕರಳು ತೂತುಬಿದ್ದರೂ ಅಷ್ಟೇ ಕುಡುಕರು ಯಾವಾಗಲೂ ಕುಡುಕರೇ.

ಅಜ್ಞಾನವೇ ಈ ಅಮಲುರೋಗದ ಮೂಲಕಾರಣ ತಿಳುವಳಿಕೆಯೇ ಸೂಕ್ತ ಪರಿಹಾರ. ಒಂದು ವೇಳೆ ಕುಡುಕುತನದ ಅಂತ್ಯವಾಗದಿದ್ದರೆ ಅಕಾಲಮೃತ್ಯು. ಇದು ತಪ್ಪಿದರೆ ಬುದ್ಧಿಭ್ರಮೆ. ಹೀಗೆ ಕುಡುಕುತನದ ದುಷ್ಪರಿಣಾಮಗಳೆಂದರೆ, ಮೊದಲು ಧನ ಹಾನಿ. ಆ ಮೇಲೆ ಮಾನಹಾನಿ, ಅಸೂಯೆ ನಂತರ ಅಂಜಿಕೆ, ವೈರತನ, ಪಶ್ಚಾತ್ತಾಪ, ಅಭದ್ರತೆ, ಅಸಮ್ಮತಿ ಕಟ್ಟ ಕಡೆಗೆ ಸ್ವಯಂ ಮರಣ. ಈ ಕೆಡಕುಗಳಿಗೆ ಕುಡುಕರು ಬಲಿಯಾಗಬೇಕಾಗುತ್ತದೆ.[1]

ಕುಡಿತದಿಂದಾಗುವ ಕೆಡಕುಗಳನ್ನು ಈ ರೀತಿ ವಿವರಿಸಲಾಗಿದೆ.

೧. ಮೆದುಳಿನ ಮೇಲೆ ಪರಿಣಾಮ

ಮದ್ಯ ಸೇವಿಸಿ ತಾತ್ಕಾಲಿಕವಾಗಿ ಅದು ಉಂಟು ಮಾಡುವ ಉಲ್ಲಾಸವನ್ನು ಗಮನಕ್ಕೆ ತೆಗೆದುಕೊಂಡು. ಅದು ಇಂದ್ರಿಯಗಳ

---

1 "ಅನಾಮಿಕ ಅಮಲುಕೋರರ ಸಂಘದ ಉವಾಚ", ಮಂಗಳೂರು–೫೭೫೦೦೨

ಶಕ್ತಿಯನ್ನು ಹೇಗೆ ಕುಗ್ಗಿಸಿದೆ ಎಂಬುದನ್ನು ಜನರು ಮರೆಯುತ್ತಾರೆ. ದೇಹದ ಒಳಭಾಗವನ್ನು ಪ್ರವೇಶಿಸುವ ಈ ವಿಷವಸ್ತು ಮೆದುಳಿನ ಕೆಲ ಭಾಗಗಳನ್ನು ಮಂದಗೊಳಿಸುತ್ತದೆ. ಕ್ರಮೇಣ ಮಾನಸಿಕ ಅವಲಂಬನೆ ಬೆಳೆಯತೊಡಗುತ್ತದೆ. ಮನಸ್ಸಿಗೆ ತುಸು ಬೇಸರ ವಾಗುತ್ತದೆ. ಕುಡಿಯೋಣ ಎನಿಸುತ್ತದೆ. ಕೆಲಸ ಮಾಡಿ ಸ್ವಲ್ಪ ತಡವಾಯಿತು, ನಿದ್ರೆ ಬರಲು ತಡವಾಯಿತು ಎಂದರೆ ಮದ್ಯ ಸೇವನೆಗೆ ಮನಸ್ಸು ಹಾತೊರೆಯುತ್ತದೆ. ನಂತರ ಅಲ್ಕೋಹಾಲ್ ಆತನಿಗೆ ಅತ್ಯಾಕರ್ಷಕ ವಸ್ತುವಾಗಿ ಪರಿವರ್ತಿತವಾಗುತ್ತದೆ. ಆಗ ಮೆದುಳಿಗೆ ತೀವ್ರ ಶ್ರಮವಾಗುವದು. ಕುಡಿತದ ಮತ್ತಿನಿಂದ ಮಿದುಳಿಗೆ ಹಾನಿಯಾದಾಗ ಈ ಕೆಳಕಾಣುವ ಮಾನಸಿಕ ಕಾಯಿಲೆ ಗಳು ಬರುತ್ತವೆ.

ವಿಪರೀತ ಮರೆವು : ಚಿತ್ತವಿಕಲತೆಯಾಗುವದು, ಶೂನ್ಯ ದಲ್ಲಿ ರೋಗಿಗೆ ಮಾತು ಕೇಳಿಸುವದು ವಿಚಿತ್ರ ಮಾತು, ವರ್ತನೆ, ನಿದ್ರಾ ತೊಂದರೆ, ಕೈಕಾಲುಗಳಲ್ಲಿ ಸಂವೇದನೆ ಕಡಿಮೆಯಾಗುವುದು.

ಸಂಶಯ ಪೀಡಿತ ಸ್ಥಿತಿ : ರೋಗಿ ವಿನಾಕಾರಣ ತನ್ನ ಹೆಂಡತಿಯನ್ನು, ಮನೆಯವರನ್ನು, ಸಹೋದ್ಯೋಗಿಗಳನ್ನು ನೆರೆ ಹೊರೆಯವರನ್ನು ಅನುಮಾನಿಸುತ್ತಾನೆ. ಅವರೆಲ್ಲಾ ತನ್ನ ವಿರುದ್ಧ ವಾಗಿದ್ದಾರೆ ತನಗೆ ಕೆಡಕು ಅಥವಾ ತೊಂದರೆ ಉಂಟು ಮಾಡಲು, ಕೊಲ್ಲಲು ಸಂಚು ಮಾಡುತ್ತಿದ್ದಾರೆ ಎಂದು ತಪ್ಪಾಗಿ ತಿಳಿಯು ತ್ತಾನೆ. ಸ್ವರಕ್ಷಣೆಯ ನೆಪದಿಂದ ಅವರ ಮೇಲೆ ಆಕ್ರಮಣ ಮಾಡುತ್ತಾನೆ. ಇಲ್ಲವೆ ಅವರಿಂದ ದೂರ ಓಡಿಹೋಗುತ್ತಾನೆ.

ಮನಹೀನ ಸ್ಥಿತಿ : ಅತಿಯಾಗಿ ಸೆರೆ ಹೀರಿ ಕುಡಿಯುವದರಿಂದ ಮಿದುಳು ನಶಿಸಿ ಹೋಗಿ, ರೋಗಿ ಮನಹೀನ ಸ್ಥಿತಿಯನ್ನು ತಲುಪುತ್ತಾನೆ. ಆಲೋಚನೆ ಮಾಡುವ ಶಕ್ತಿ, ನೆನಪು, ಬುದ್ಧಿ, ವಿವೇಚನೆ ಪರಿಸರವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ, ಪ್ರಜ್ಞಾಸ್ಥಿತಿ, ತನ್ನತನದ ಅರಿವು ಎಲ್ಲವೂ ಹಾಳಾಗುತ್ತದೆ ರೋಗಿ ಕೈಕಾಲು ಆಡಿಸಬಲ್ಲ ನಿರ್ಜೀವ ಬೊಂಬೆಯಂತೆ ಜೀವಿಸುತ್ತಾ, ಪರಾವಲಂಬಿಯಾಗಿ ಕೆಲಕಾಲ ಬದುಕಿ ಸಾಯುತ್ತಾನೆ. ಹೀಗೆ ಕುಡಿತದಿಂದ ಚಿತ್ತಭ್ರಮೆ, ಉಗ್ರಕೋಪ, ಹಾಗೂ ಅವಿವೇಕತನ ಕಾಣಿಸಿಕೊಳ್ಳುವದು.

೨. ದೇಹದ ಮೇಲಾಗುವ ಪರಿಣಾಮಗಳು

ಮದ್ಯಪಾನದಿಂದ ಜಠರದಲ್ಲಿ ಕೆರಳಿಕೆ ಪ್ರಾರಂಭವಾಗುವದು. ಪಿತ್ತಕೋಶ, ಮೂತ್ರ ಪಿಂಡಗಳಲ್ಲಿ ವಿನಾಶಕಾರಕ ಪ್ರತಿಕ್ರಿಯೆ. ನರಗಳ ದೌರ್ಬಲ್ಯವನ್ನುಂಟು ಮಾಡಿ ಕರ್ತವ್ಯ ದಕ್ಷತೆಯನ್ನು ನಾಶಪಡಿಸುವದು. ಇದರ ಗುಂಗು ಹೆಚ್ಚಿದಂತೆಲ್ಲಾ ಒಂದು ತರಹದ ಮೈ ನಡಗು ಬಿಡುವದು, ನಾಲಿಗೆ ತೊದಲುತ್ತದೆ. ವಿಪರೀತ ಬೆವರು, ಶರೀರದ ಮಾಂಸ ಖಂಡಗಳು ನೋವನ್ನುಂಟು ಮಾಡುತ್ತವೆ, ವಾಂತಿ ಬರುವಂತಾಗುತ್ತದೆ, ತಲೆ ಭಾರವಾಗಿ, ಆಲೋಚಿಸುವುದೇ ಕಷ್ಟವಾಗುತ್ತದೆ. ಕೆಲವು ಸಲ ಫಿಟ್ಸ್ ಬಂದರೂ ಬರಬಹುದು. ಈ ಎಲ್ಲ ಲಕ್ಷಣಗಳು ಮದ್ಯಸೇವನೆ ಮಾಡಿದ ಐದು ಹತ್ತು ನಿಮಿಷಗಳಲ್ಲಿ ಮಾಯವಾಗುವದನ್ನು ಕಂಡರೆ ಆ ವ್ಯಕ್ತಿಗೆ ಸೆರೆಯು 'ದೇವರ ಸಮಾನ'ವಾಗುತ್ತದೆ. ಒಂದು ವೇಳೆ ಒಂದು ದಿನ ಅಥವಾ ಎರಡು ದಿನ ಮದ್ಯ ಸೇವಿಸದಿದ್ದರೆ; 'ನಡುಕ ಸನ್ನಿ' ಹೆಚ್ಚಾಗುವದು. ಸಕಾಲದಲ್ಲಿ ಸೂಕ್ಷ್ಮ ಚಿಕಿತ್ಸೆ

ದೊರೆಯದಿದ್ದರೆ ರೋಗಿಯ ಪ್ರಾಣಕ್ಕೇ ಅಪಾಯವಾಗಬಹುದು. ಕುಡುಕರು ತಮ್ಮ ಹೆಂಡತಿ, ಮಕ್ಕಳು, ಬಂಧು ಬಳಗದವರನ್ನು ಅನಾಥರನ್ನಾಗಿ ಮಾಡುವರು. ಆತನನ್ನು ಅವಲಂಬಿಸಿದವರು ರಾಷ್ಟ್ರಕ್ಕೆ ಹೊರೆಯಾಗುವರು.

೩. ಜೀರ್ಣಾಂಗಗಳ ನಾಶ

ಕುಡುಕರು ಬರಿದಾದ ಹೊಟ್ಟೆಯಲ್ಲಿ ಮದ್ಯ ಸೇವನೆ ಮಾಡಿದರೆ ಸೆರೆಯಲ್ಲಿರುವ ಕ್ಷಾರವು ಜಠರ ಮತ್ತು ಕರುಳಿನ ಒಳಭಾಗವು ಸುಟ್ಟು ಬಿಡುತ್ತದೆ. ಹೀಗಾಗಿ ಹೊಟ್ಟೆಯಲ್ಲಿ ಹುಣ್ಣು ಗಳು ಆಗುವ ಸಂಭವವಿರುವದು. ಮಹಾತ್ಮಾ ಗಾಂಧಿಯವರು ಹೇಳುವಂತೆ–

"ಮದ್ಯಪಾನವು ಒಬ್ಬನ ಜೀರ್ಣಾಂಗ ನಾಶ ಪಡಿಸುತ್ತದೆ.
ಮದ್ಯಪಾನವು ಒಬ್ಬನ ಜಾಣ್ಮೆಯನ್ನು ಹಾಳು ಮಾಡುತ್ತದೆ.
ಮದ್ಯಪಾನವು ಒಬ್ಬನ ಜೀವಕೋಶದಲ್ಲಿ ಸೇರಿ
ಕ್ಯಾನ್ಸರ ರೋಗವನ್ನು ಹುಟ್ಟಿಸುತ್ತದೆ.[2]

೪. ಯಕೃತ್ತದ ಮೇಲೆ ಪರಿಣಾಮ

ಫ್ರಾನ್ಸ್ ಮತ್ತು ಇಂಗ್ಲಂಡಿನಲ್ಲಿ ನಡೆಸಿದ ಯಕೃತ್ತಿನ ರೋಗದಿಂದ ಬಳಲುತ್ತಿರುವ ರೋಗಿಗಳ ಪರೀಕ್ಷೆಯಿಂದ ಮದ್ಯವು ಮಹಿಳೆಯರ ಆರೋಗ್ಯದ ಮೇಲೆ ಹೆಚ್ಚು ಗಂಭೀರವಾದ ಪರಿಣಾಮ ಬೀರುತ್ತದೆಂದು ತಿಳಿದು ಬಂದಿದೆ. ತಜ್ಞ ಡಾಕ್ಟರರ ಅಭಿಪ್ರಾಯದಂತೆ ಗಂಡಸರ ಹಾಗೂ ಹೆಂಗಸರ ದೇಹದ ಗಾತ್ರ ಹಾಗೂ ರಚನೆಯಲ್ಲಿರುವ ವ್ಯತ್ಯಾಸವು ಸಹ ಕಾರಣವಾಗಿದೆ.

2 ಭಾವಜೀವಿ 'ಗಾಂಧೀ ವಿಚಾರ ದರ್ಶನ'

ಯಾರಲ್ಲಿ ಕೊಬ್ಬು ಹೆಚ್ಚಾಗಿದೆಯೋ ಅವರ ದೇಹದಲ್ಲಿ ಹೆಚ್ಚು ರಕ್ತ ಕೇಂದ್ರೀಕೃತವಾಗುತ್ತದೆ. ಇಂಥವರು ಮದ್ಯಸೇವನೆ ಮಾಡಿದರೆ ಯಕೃತ್ತಿಗೆ ಹೆಚ್ಚು ಹಾನಿಯಾಗುತ್ತದೆ. ಒಟ್ಟಿನಲ್ಲಿ ಹೇಳಬೇಕೆಂದರೆ, ಕುಡಿಯಲು ಪ್ರಾರಂಭಿಸಿದ ನಾಲ್ಕಾರು ವರ್ಷಗಳಲ್ಲಿ ನಿಶ್ಚಿತವಾಗಿ ಯಕೃತ್ತವು ಕೆಟ್ಟು ನಾಶವಾಗುತ್ತದೆ ಎಂದು ಜಗತ್ತಿನ ತಜ್ಞರ ಅಭಿಪ್ರಾಯವಾಗಿದೆ.

೫. ನರಮಂಡಲದ ಮೇಲೆ ಪರಿಣಾಮ

ಅತಿಯಾಗಿ ಮದ್ಯ ಸೇವಿಸುವದರಿಂದ ಮದ್ಯದಲ್ಲಿಯ ವಿಷ ಪದಾರ್ಥಗಳು ಶರೀರದಲ್ಲಿ ಪ್ರವೇಶಿಸಿ ರಕ್ತ ಚಲನವಲನೆಯ ಮೇಲೆ ಹೆಚ್ಚು ಪ್ರಭಾವ ಬೀರಿ ನೈಸರ್ಗಿಕ ಕ್ರಿಯೆಗಳನ್ನು ಅಸ್ತವ್ಯಸ್ತ ಗೊಳಿಸುವದು. ಇದರ ಪ್ರಭಾವ ದೇಹದ ನರಮಂಡಲದ ವ್ಯವಸ್ಥೆಯಲ್ಲಿ ಅಶಕ್ತತೆ ತಲೆದೋರುತ್ತದೆ. ಹೀಗೆ ಶರೀರದ ಅಂಗಗಳ ಅಸ್ವಾಧೀನ, ಕೊನೆಗೆ ವೃದ್ಧಾಪ್ಯ ಸಮೀಪಿಸುವದು. ಈ ಎಲ್ಲ ಕ್ರಿಯೆಗಳು ಕುಡಿತದ ದುಷ್ಪರಿಣಾಮಗಳು.[3]

೬. ಕೌಟುಂಬಿಕ ವಿಘಟನೆ

ಸುರೆಯ ಸೇವಿಸುವವನ । ಸುರಿಗೆಯನು ಹಿಡಿದವನ ।
ದೊರೆಯೊಲುಮೆಗಾಗಿ ಹೆಣಗುವನ ಕಾಯುವದು ।
ಸೊರಗಿ ಸಾಯುವದು । ಸರ್ವಜ್ಞ.[4]

ಅಂದರೆ ಸೆರೆಯನ್ನು ಕುಡಿಯುವವನ ಮತ್ತು ಖಡ್ಗವನ್ನು ಹಿಡಿದವನ ಅದರಂತೆ ಒಬ್ಬ ದೊರೆಯ ಇಲ್ಲವೆ ಆಳುವವರ ಪ್ರೀತಿ

3 K. Singh 'Criminology & Social Disorganisation'
4 ಸರ್ವಜ್ಞನ ವಚನಗಳು : 'ಸರ್ವಜ್ಞ ವಚನ ಸಂಗ್ರಹ'

ಗಳಿಸಲು ಹೆಣಗುವವನ ಶರೀರವು ಸೊರಗಿ, ಸಾಯುವದು ಎಂದು ಸರ್ವಜ್ಞ ವಿವರಿಸುತ್ತಾನೆ.

ಕುಡಿತ ಹಾಗೂ ಕೌಟುಂಬಿಕ ವಿಘಟನೆಗೂ ನಿಕಟ ಸಂಬಂಧ ಇದೆ. ಗಂಡನಾಗಲಿ, ಹೆಂಡತಿಯಾಗಲಿ ಅತಿಯಾಗಿ ಕುಡಿದರೆ ಸಾಕು, ಮೊದಲಿಗೆ ಅವರಲ್ಲಿ ವೈಮನಸ್ಸು ಪ್ರಾರಂಭ; ಅದು ಬೆಳೆಯುತ್ತ ಮುಂದುವರಿದರೆ ಇಬ್ಬರಲ್ಲಿ ಸಂಬಂಧ ಒಡೆಯಲಾರಂಭಿಸುವದು. ಹೊಸದಾಗಿ ಲಗ್ನ ಮಾಡಿಕೊಂಡ ಹೆಂಡತಿ ನಂಬಿ ಸಂಸಾರ ಹೂಡಲು ಬಂದ ಅವಳ ಗಂಡನೇ ಕುಡುಕನಾಗಿ ಬಿಟ್ಟಾಗ ಅವಳ ದುಃಸ್ಥಿತಿ ಯಾವ ರೀತಿಯದು ? ಮಕ್ಕಳ ಗತಿಯೇನು ? ಹೀಗೆ ಒಂದಲ್ಲ ಒಂದು ದಿನ ಬಡಿದಾಡಿ ವಿವಾಹ ವಿಚ್ಛೇದನ ಮಾಡಿ ಕೊಂಡರೂ ತಪ್ಪೇನಿಲ್ಲ !

'ಮದ್ಯಪಾನವ ಮಾಡಿ । ಇದ್ದುದೆಲ್ಲವ ನೀಡಿ ।
ಬಿದ್ದು ಬರುವವನ ಸದ್ದಡಗಿ ಸಂತಾನ ।
ಮೆದ್ದು ಹೋಗುವದು ಸರ್ವಜ್ಞ' ।

ಅಮಲುಕೋರರು ಕುಡಿದು, ಕುಡಿದು ತಮ್ಮ ಎಲ್ಲ ಆಸ್ತಿ ಪಾಸ್ತಿಯನ್ನು ಗಾಳಿಯಲ್ಲಿ ತೂರಿ ಫುಟ್‌ಪಾತಿನಲ್ಲಿ ಬೀಳುವವನ ಹೆಂಡತಿ, ಮಕ್ಕಳು ಬೀದಿ ಪಾಲಾದರೂ ಸರಿಯೇ, ಇಲ್ಲವೆ ಅನಾಥ ರಾಗಿ ದೇಶ ಸಂಚಾರಿಗಳಾದರೂ ಆಗಬಹುದು ಎಂದು ಸರ್ವಜ್ಞ ಕವಿಯು ಹೇಳುತ್ತಾನೆ.

ಇಂದು ಗಂಡ ಕುಡಿದು ಮತ್ತೇರಿ, ತನ್ನ ಹೆಂಡತಿ ಮಕ್ಕಳನ್ನು ಕೊಂದ ಘಟನೆಗಳನ್ನು ನಾವು ಪತ್ರಿಕೆಗಳಿಂದ ಕಾಣಬಹುದು. ಕರ್ನಾಟಕದಲ್ಲಿ ಹಮಾಲನೊಬ್ಬ ತನ್ನ ಪತ್ನಿ ಕುಡಿಯಲು ಹಣ

ಕೊಡಲಿಲ್ಲ ಎಂದು ಸಿಟ್ಟಾಗಿ ಅವಳ ಮೇಲೆ ಸೀಮೆ ಎಣ್ಣೆ ಸುರಿದು ಉರಿ ಹಚ್ಚಿ ಬಿಟ್ಟ. ನಂತರ ಅವಳು ಆಸ್ಪತ್ರೆಯಲ್ಲಿ ಸತ್ತಳು. ಗಂಡನ ಕುಡಿತಕ್ಕೆ ಬೇಸತ್ತು ಹೊಟ್ಟೆಗಿಲ್ಲದೆ ಮಕ್ಕಳು ಸಹಿತ ಭಾವಿ ಹಾರಿ ಕೊಂಡು ಆತ್ಮಹತ್ಯೆ ಮಾಡಿದ ಘಟನೆಗಳು ಸಹ ಅನೇಕ ಕಡೆಗೆ ಜರುಗಿವೆ.

೭ ಹೃದಯದ ಮೇಲೆ ಪರಿಣಾಮ

ಕುಡುಕರ ಹೃದಯದ ಮೇಲೆ ಮದ್ಯವು ಸಾಕಷ್ಟು ಪರಿಣಾಮ ಬೀರುತ್ತದೆ. ಕಾಲಕ್ರಮೇಣ ಕುಡಿದಂತೆ Gastrititis ಅಂದರೆ ಹೊಟ್ಟೆಯಲ್ಲಿ ಗ್ಯಾಸ್ ಹೆಚ್ಚಾಗುವದು. ಅತೀಯಾಗಿ ಮದ್ಯಪಾನ ಮಾಡಿದರೆ ರಕ್ತವಾಂತಿಯಾಗುವದು. ರಕ್ತವಾಹಿನಿಗಳ ಮೇಲೆ ಮದ್ಯದ ಪರಿಣಾಮ ವಿಪರೀತವಾಗುತ್ತದೆ. ಮೊದ ಮೊದಲು ಹೃದಯವು ಉತ್ತೇಜನಗೊಳ್ಳುವದರಿಂದ. ಹೃದಯದ ಬಡಿತ ಹೆಚ್ಚುತ್ತದೆ. ಕುಡಿತದಿಂದ ರಕ್ತ ಕಣಗಳ ಉತ್ಪತ್ತಿ ಕಡಿಮೆ ಯಾಗಿ ಅವುಗಳ ಸಂಖ್ಯೆಯು ರಕ್ತದಲ್ಲಿ ಕುಂಟಿತಗೊಂಡು ರೋಗಿಯು ರಕ್ತಹೀನತೆ Anaemia ಯಿಂದ ಬಳಲುತ್ತಾನೆ. ಕಾಲಕ್ರಮೇಣ ರಕ್ತದ ಒತ್ತಡ ಹೆಚ್ಚುತ್ತದೆ, ಮತ್ತು ಹೃದಯ ನಿಂತು, ರೋಗಿ ಸಾಯಬಹುದು.

೮ ಧನಹಾನಿ

"ಸುರೆಯ ಸೇವಿಸುವಂಗೆ । ಸಿರಿವರ್ಗ ಹಿಡಿದಂಗೆ ।
ದೊರೆಯಲ್ಲಿ ತೇಜ ಪಡೆದಂಗೆ । ಶಿರವಿಹುದು ।
ಸ್ಥಿರವಲ್ಲ ನೋಡ । ಸರ್ವಜ್ಞ"

ಸೆರೆಯನ್ನು ಸೇವಿಸುವವರು, ಸಂಪತ್ತನ್ನು ಆಶ್ರಯಿಸಿದವರು, ಅರಸನಲ್ಲಿ ಕುದುರೆಯನ್ನು ಪಡೆದವರು ಈ ಮೂರು ರೀತಿಯ ಗುಣವುಳ್ಳವರು ಯಾವತ್ತಾದರೂ ಕಷ್ಟಕ್ಕೆ ಈಡಾಗುತ್ತಾರೆ ಎಂಬುದಾಗಿ ಸರ್ವಜ್ಞ ಕವಿ ವಿವರಿಸುತ್ತಾನೆ.

ಕುಡುಕರು ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಹದಗೆಡಿಸಿ ಕೊಳ್ಳುತ್ತಾರೆ. ತನ್ನ ಸಂಪಾದನೆಯ ಹಣವನ್ನೆಲ್ಲಾ, ಆಸ್ತಿಪಾಸ್ತಿ ಯನ್ನೆಲ್ಲಾ ಆಲ್ಕೋಹಾಲ್ ಕೊಂಡುಕೊಳ್ಳಲು ಉಪಯೋಗಿಸು ತ್ತಾನೆ. ಕುಡುಕರು ಒಂದು ವೇಳೆ ಹೊಟ್ಟೆಯ ತುಂಬ ಅನ್ನಕ್ಕೂ ಅನಾಥರಾಗುವರು. ಕೊನೆಗೆ ಭಿಕ್ಷೆ ಬೇಡಿ ಬಾಳಬೇಕಾಗುವುದು. ಹೀಗೆ ಕುಡುಕನ ಹೆಂಡತಿ ತನ್ನ ಗಂಡ ಕುಡಿಯುವವನ್ನು ಬಿಟ್ಟ ಮೇಲೆ ಒಂದು ವಿಷಯ ಕೇಳಿದಳು. ನೀವು ಕುಡುಕರಾಗಿದ್ದಾಗ ಒಂದು ದಿನ ಮಕ್ಕಳು ತಿನ್ನಲು ಏನೂ ಇಲ್ಲದೆ ಉಪವಾಸದಲ್ಲೇ ಶಾಲೆಗೆ ಹೋದರು ಎಂದು ಅಂದಾಗ ಈತ ಖಂಡಿತವಾಗಿ ನಾನು ನಂಬಲಾರೆ ಎಂದನು. ಕುಡಿಯುವವರಿಗೆ ಮನೆಯ ಅರಿವೇ ಇರುವದಿಲ್ಲ. ಕುಡಿತದಿಂದ ಧನಹಾನಿ ಅಂದರೆ ಹೊಲ, ಮನೆ ದಿವಾಳಿ ತೆಗೆಯುವದು. ಅದರಂತೆ ದುಡಿಯುವ ಶಕ್ತಿಯನ್ನು ಕಳೆದುಕೊಂಡು, ದೈಹಿಕ ಶಕ್ತಿಯನ್ನು ಹದಗೆಡಿಸಿಕೊಳ್ಳುವದು ಆಗಿದೆ.

೯ ಮಾನ ಹಾನಿ

ಕುಡುಕರು ಮದ್ಯವೆಂದರೆ ಇದೊಂದು ಕೆಟ್ಟ ಪಾನೀಯ ವೆಂದು ತಿಳಿದವರೂ ಸಹ ಕುಡಿಯುವದನ್ನು ಮಾತ್ರ ಬಿಡಲಾರರು.

ಇದರಿಂದಾಗಿ ಮಿತಿ ಮೀರಿ ಕುಡಿದು ತಿರುಗಾಡುವವರಿಗೆ ಸಮಾಜ ದಲ್ಲಿ ಯಾವ ಜನರು ಮರ್ಯಾದೆ, ಗೌರವ ಸಲ್ಲಿಸಲಾರರು. ಕುಡುಕರಿಗೆ ಮನಸ್ಸನ್ನು ಬಿಗಿ ಹಿಡಿಯುವ ಶಕ್ತಿಯಿಲ್ಲ. ಮನಸ್ಸು ಏನು ಬಯಸುವದೋ ಆತ ಅದನ್ನೇ ಮಾಡುವನು. ಊರ, ನಗರ ಬೀದಿಗಳಲ್ಲಿ ಉರುಳಾಡಿ ಫುಟ್‌ಪಾತಿನಲ್ಲೆ ಬಿದ್ದಾಡಿ, ರೊಜ್ಜಿನಲ್ಲಿ ಬಿದ್ದು ಮೈಯೆಲ್ಲ ಹೊಲಸು ಕೊಳಚೆ ಬಡಿದುಕೊಂಡು ರಾತ್ರಿ, ಹಗಲುಗಳಲ್ಲಿ ಈ ಅಮಲುರೋಗಿಗಳನ್ನು ಕಂಡರೆ ಎಲ್ಲಿಯ ಮಾನ, ಮರ್ಯಾದೆ ಎಂದು ಅನಿಸುವದು.

ಹೆಂಡವನು ಕುಡಿ ಕುಡಿದು | ಕಂಡವರ ತಾ ಜರಿದು |
ಭಂಡು ನುಡಿಗಳಿಗೆ । ನಾಚದ ನೀಚನ |
ಕಂಡಿಹರೆ ತೊಲಗು. ಸರ್ವಜ್ಞ.

ಸೆರೆ, ಸಿಂದಿ ಇಲ್ಲವೆ 'ಫೆನ್ನಿ' ಎಂಬ ಹೆಂಡವನ್ನು ಕುಡಿದು, ಮೂರ್ಖರಂತೆ ಎಲ್ಲ ಜನರನ್ನು ಸಿಕ್ಕಾಪಟ್ಟೆ ಅವಾಚ್ಯ ಶಬ್ದಗಳಿಂದ ಬೈಯ್ದು, ನಾಚಿಕೆ, ಎಚ್ಚರಿಕೆ, ಜವಾಬ್ದಾರಿಯನ್ನು ಮರೆತು, ಮನ ಬಂದಂತೆ ವರ್ತಿಸುವವರು ಯಾವಾಗಲೂ ನೀಚರು ಎಂಬುದಾಗಿ ಈ ಪದ್ಯದ ಅರ್ಥ ಆಗುವದು,

ನೆರೆಹೊರೆಯುವರು ಕುಡುಕ ಬಂದನೆಂದರೆ ತಮ್ಮ ಮನೆಯ ಬಾಗಿಲು ಮುಚ್ಚಿಕೊಳ್ಳುವರು. ಚಿಕ್ಕ ಮಕ್ಕಳು ಒಂದೊಂದು ಸಲ ಕಲ್ಲು ಎಸೆಯುವದು, ನಾಯಿಗಳನ್ನು ಮೈಮೇಲೆ ಬಿಡುವದು ಮಾಡುತ್ತವೆ. ಇಷ್ಟೇ ಅಲ್ಲದೆ ಕುಡುಕನೆಂದರೆ ಸಾಕು ಯಾರೂ ಅಂಥವರಿಗೆ ನೌಕರಿಯನ್ನಾಗಲಿ ದಿನಗೂಲಿ ಕೆಲಸವನ್ನಾಗಲಿ ಕೊಡ ಲಾರರು ಯಾಕೆಂದರೆ, 'ಅವ ಕುಡುಕ' ಅವ ಎಂತಹ ಕೆಲಸ

ಮಾಡುತ್ತಾನೆ, ಎಂದು ಹೀಯಾಳಿಸುತ್ತಾರೆ. ಕುಡುಕ ತನ್ನ ಕುಡಿತವನ್ನು ಸಂಪೂರ್ಣವಾಗಿ ಬಿಟ್ಟ ಮೇಲೆಯಾದರೂ ಸಮಾಜ ಅವನನ್ನು ನಂಬುವದಿಲ್ಲ. ಒಮ್ಮೆ ಕುಡುಕ ಎಂದು ತಲೆಗೆ ಪಟ್ಟಿ ಹಚ್ಚಿದರೆ ತೀರಿತು, ಮತ್ತೆ ಜನರ ದೃಷ್ಟಿಯಲ್ಲಿ ಅವ ಸಾಯುವ ವರೆಗೂ ಕುಡುಕನೇ. ಇದು ಸಮಾಜ ಕುಡುಕರಿಗೆ ಕೊಡುವ ಗೌರವ. ಮದ್ಯಪಾನಿಗಳು ಏನೂ ಮಾಡಲು ಹೇಸುವದಿಲ್ಲವೆಂದು ಇವರ ಸಮೀಪಕ್ಕೆ ಯಾರೂ ಬರುವದಿಲ್ಲ.

ಹೀಗಾಗಿ ಕುಡುಕರ ಸಾಮಾಜಿಕ, ನೈತಿಕಮಟ್ಟ ಕುಸಿಯುತ್ತದೆ. ವಿವೇಚನೆ ಹಾಳಾಗುತ್ತದೆ. ನಾಚಿಕೆ, ಮಾನ ಮರ್ಯಾದೆ, ನೀತಿ ನಿಯಮಗಳನ್ನು ಗಾಳಿಗೆ ತೂರುತ್ತಾರೆ. ತನ್ನ ಮನೆಯವರಿಗೆ ಆಪ್ತಸ್ನೇಹಿತರಿಗೆ, ಸಹೋದ್ಯೋಗಿಗಳಿಗೆ ಸುಳ್ಳು ಹೇಳುತ್ತಾನೆ. ಮೋಸ ಮಾಡುತ್ತಾನೆ. ಸಾಲ ಮಾಡುತ್ತಾನೆ. ಕಳ್ಳತನ ಮಾಡಲು ಹೇಸುವದಿಲ್ಲ. ಅಲ್ಕೋಹಾಲ್ ಅಥವಾ ಹಣ ಸಿಗುತ್ತದೆ ಎಂದರೆ ಎಂತಹ ಹೀನಕೃತ್ಯ, ಅಪರಾಧವನ್ನೂ ಮಾಡಲು ಹಿಂದೆ ಮುಂದೆ ನೋಡುವದಿಲ್ಲ.

'ಸಿಂದಿಯನ್ನು ಸೇವಿಪನು | ಹಂದಿಯಂತಿರುತಿಹನು |
ಹಂದಿಯೊಂದೆಡೆಗಿ ಉಪಕಾರಿ । ಕುಡುಕನು
ಹಂದಿಗೂ ಕಷ್ಟ ಸರ್ವಜ್ಞ.

ಸರ್ವಜ್ಞ ಕವಿಯು ಕುಡುಕರನ್ನುದ್ದೇಶಿಸಿ ಹೀಗೆ ಹೇಳುತ್ತಾನೆ. ಸಿಂದಿಯನ್ನು ಕುಡಿಯುವವನು, ಹಂದಿಯಂತೆ ಇರುವನು. ಬೀದಿ ರಾಡಿಗಳಂತೆ ಬೀಳುವನು, ಹಂದಿ ಒಂದು ದೃಷ್ಟಿಯಿಂದ

ನೋಡಿದರೆ ಉಪಕಾರಿ, ಆದರೆ ಕುಡುಕನು ಹಂದಿಗಿಂತಲೂ ಕನಿಷ್ಠನಿದ್ದಾನೆ.

ಕುಡಿತ ಬಿಟ್ಟವನೊಬ್ಬ ಅವನನ್ನು ಚೆನ್ನಾಗಿ ಬಲ್ಲವರ ಬಳಿ ನೌಕರಿ ಕೇಳಲು ಹೋದನಂತೆ, ಸರ್ ನಾನು ಕುಡಿಯುವದನ್ನು ಬಿಟ್ಟು ನಾಲ್ಕೈದು ವರ್ಷಗಳಾಗಿವೆ. ದಯುವಿಟ್ಟು ಕೆಲಸ ಕೊಡಿರಿ ಅಂದನಂತೆ, ಅಧಿಕಾರಿಗಳು ಕೇಳಿದರು ನೀನು ಪುನಃ ಕುಡಿಯುವು ದಿಲ್ಲ ಅಂತ ಏನು ಗ್ಯಾರಂಟಿ ? ಎಂದು ಕುಡುಕನನ್ನು ತಿರುಗಿ ಕಳಿಸಿದರು. ಆದರೆ ಅವನು ಒಂದು ಪ್ರಶ್ನೆ ಕೇಳಬಹುದಾಗಿತ್ತು ಏನೆಂದರೆ ಸರ್ ಇದುವರೆಗೆ ಕುಡುಕರಾಗಿರುವ ನೀವು ಮುಂದಕ್ಕೆ ಕುಡಿಯಲು ಸುರಾಪ್ರ ಮಾಡುವದಿಲ್ಲ ಅಂತಾ ಯಾವ ಗ್ಯಾರಂಟಿ ? ಹೀಗೆ ಕೇಳಿದ್ದರೆ ಬಹುಶಃ ಅಧಿಕಾರಿ ತನ್ನ ತಪ್ಪು ಗುಟ್ಟು ಬಯಲಿಗೆ ಬರಬಾರದೆಂದು ಆ ಕುಡುಕನಿಗೆ ನೌಕರಿ ಕೊಡಬಹು ದಾಗಿತ್ತೇನೋ ಎಂದು ಅನಿಸುವದು.

ಕಚೇರಿ ಸೇವಾ ಸಿಬ್ಬಂದಿ ವರ್ಗದವರು ಈ ಕುಡಿತದ ಸೆಳವಿಗೆ ಬಲಿ ಬಿದ್ದಿರುವರು. ಇವರು ದಿನ ಕಳೆದಂತೆ ಆಫೀಸಿನಲ್ಲಿ ಕೆಲಸ ಮಾಡುವದೇ ಇಲ್ಲ. ಅವರಿದ್ದ ಮನೆಯ ಬಾಡಿಗೆಯೂ ಸಹ ಸಕಾಲಕ್ಕೆ ಮುಟ್ಟುವದಿಲ್ಲ. ಮನೆಯ ಮಾಲಿಕರು ಕುಡಿತದ ಗಲಾಟೆ ತಡೆಯಲಾರದೆ, ಬಾಡಿಗೆ ಸಿಗಲಾರದೆ ಮನೆಯನ್ನು ಬಿಡಲು ಕೇಳುತ್ತಾರೆ. ಕೊನೆಗೆ ಮಾಲಿಕನಿಗೂ ಮತ್ತು ಕುಡುಕನಿಗೂ ಜಗಳವಾದರೂ ಆಗಬಹುದು. ಮನೆ ಬಿಟ್ಟು ಹೊರದೂಡಬಹುದು. ತನ್ನ ಗಂಡ ಕುಡಿದು ಇಂತಹ ಅಸಹ್ಯ, ಅಗೌರವಕ್ಕೆ ಕಾರಣನಾದನೆಂದು ಭಾವಿಸಿ ಹೆಂಡತಿಯು

ತನ್ನ ತವರಿಗೆ ಹೋಗಬಹುದು. ಹೀಗೆ ಕುಡುಕರಿಗೆ ಅನೇಕ ತೊಂದರೆಗಳು ಬರುತ್ತವೆ. ವಿದ್ಯಾರ್ಥಿಗಳು ಸಹ ಮದ್ಯದ ಮತ್ತಿನಲ್ಲಿ ವಿದ್ಯಾಭ್ಯಾಸ ಮೂಲೆ ಗುಂಪಾದರೂ ಸರಿಯೇ ತಮ್ಮ ತಮ್ಮಲ್ಲಿ ಗುಂಪುಗಾರಿಕೆ, 'ಗುಂಡಾಗಿರಿ' ಬೆಳೆದರೂ ಬೆಳೆಯಬಹುದು. ಅಂತಿಮವಾಗಿ ಇವರೆಲ್ಲರು ಸಮಾಜಕ್ಕೆ ತಲೆನೋವಾಗಿ ಪರಿಣಮಿಸಬಹುದು. ಇದನ್ನು ನಿವಾರಿಸಿಕೊಳ್ಳಲು ಸಮಾಜ ಪರಿಣಾಮಕಾರಿಯಾದ ನಿವಾರಣೋಪಾಯಗಳನ್ನು ಹುಡುಕಬೇಕಾಗುವದು.[1]

೧೦ ಪ್ರಾಣಹಾನಿ

ಸತತ ಕುಡಿತದ ಪರಿಣಾಮವಾಗಿ ಆರೋಗ್ಯ ಹಾಳಾಗಿ, ರಕ್ತ ದಿನ-ದಿನ ಕಡಿಮೆಯಾಗಿ ಪೂರ್ಣ ಅಶಕ್ತರಾಗುತ್ತಾರೆ. ರಕ್ತದಲ್ಲಿರುವ ರೋಗ ನಿರೋಧಕಶಕ್ತಿ ಕಡಿಮೆಯಾಗುತ್ತದೆ. ಕರುಳುಗಳಿಗೆಲ್ಲ ಸಣ್ಣ ಸಣ್ಣ ರಂಧ್ರಗಳು ಕಾಣಿಸುತ್ತವೆ. ಮೈಯೆಲ್ಲ ಬಾಡಿದ ಹುಣ್ಣಿನಂತೆ ತದ್ದುಗಳು (ಕಲೆಗಳು) ಏಳಲು ಆರಂಭಿಸುವವು. ಇವರಿಂದ ಕೊನೆಗೆ ಸಾವನ್ನು ಅಪ್ಪುವನು. ಮೋಟಾರ್ ವಾಹನಗಳನ್ನು ನಡೆಸುವವರಂತೂ ಆಲ್ಕೋಹಾಲನ್ನು ಅತಿಯಾಗಿ ಸೇವಿಸಲೇಬಾರದು. ಯಾಕೆಂದರೆ ಇದು ಅವರ ದೃಷ್ಟಿಯನ್ನು ಕುಗ್ಗಿಸುವದರಿಂದ ರಾತ್ರಿ ವೇಳೆಯಲ್ಲಿ ವಿರದ್ಧ ಮಾರ್ಗದಲ್ಲಿ

---

1 Dr. Baldev singh. "Alcohol & Disorders of Nerveus system."

ಓಡುತ್ತಿರುವ ವಾಹನಗಳಿಗೆ ಡಿಕ್ಕಿ ಹೊಡೆಸುವ ಸಂದರ್ಭ ಒದಗ ಬಹುದು. ಹೀಗೆ ಮದ್ಯಪಾನ ಮಾಡಿ ವಾಹನ ನಡೆಸುವ ಒಬ್ಬ ಚಾಲಕನು ನಿರಪರಾಧಿಗಳ ಜೀವಕ್ಕೆ ಅಪಾಯವನ್ನುಂಟು ಮಾಡ ಬಹುದು. ಅತಿಯಾಗಿ ಕುಡಿದು ಮಿತಿಮೀರಿದ ವೇಗದಿಂದ ವಾಹನ ಓಡಿಸಿ ಅಪಘಾತವುಂಟು ಮಾಡುವವ ನಿಜವಾದ ಕೊಲೆಗೆ ಪ್ರಯತ್ನ ಮಾಡಿದಂತಲ್ಲವೇ ? ಇವರಿಗೆ ಗಲ್ಲು ಶಿಕ್ಷೆ ಯಾಕೆ ಕೊಡು ವದಿಲ್ಲ? ಹೀಗಿರುವಾಗ ಇಂತಹ ಅಪಘಾತಗಳೆಲ್ಲವು ಸಮಾಜದಿಂದ ಅಂಗೀಕಾರ ಪಡೆದುಕೊಂಡಿವೆ ಎಂದು ಅರ್ಥವಾಗುತ್ತದೆ.

ಭಾರತದಲ್ಲಿ ನಡೆಯುವ ಒಟ್ಟು ಕೊಲೆಗಳಲ್ಲಿ ಅರ್ಧ ಕ್ಕಿಂತ ಹೆಚ್ಚು ಕೊಲೆಗಳು ಕೇವಲ ಮದ್ಯಪಾನ ಸೇವಿಸು ವದರಿಂದಲೇ ಎಂದು ತರ್ಕಿಸಲಾಗಿದೆ. ಇಂದು ಸಮಾಜದಲ್ಲಿ ಆಗುವ ಸಾಕಷ್ಟು ಆತ್ಮಹತ್ಯೆಗಳಿಗೆ ಈ ಮದ್ಯಪಾನವೇ ಕಾರಣ ವಾಗಿದೆ. ಯಾಕೆಂದರೆ ಕುಡಿದು ಆತ್ಮಹತ್ಯೆಯನ್ನು ಮಾಡಿಕೊಂಡ ವರನ್ನು ತಪಾಸಣೆ ಮಾಡಿದರೆ ಅವರ ಶರೀರದಲ್ಲಿ ಹೆಚ್ಚಾಗಿ ವಿಷ ಇಲ್ಲವೆ ಅತೀ ಹೆಚ್ಚಿನ ಮದ್ಯ ಇದ್ದದ್ದು ಕಂಡುಬರುವದು.

ಈಗಾಗಲೇ ಹೇಳಿದಂತೆ ಯಾರ ಮೈಯಲ್ಲಿ ಹೆಚ್ಚು ಕೊಬ್ಬು ಇರುವದೋ ಅವರು ಮದ್ಯಪಾನ ಮಾಡಿದರೆ, ಕೊಬ್ಬಿನೊಳಗೆ ಮದ್ಯ ಸೇರಲಾರದೆ ರಕ್ತ ಗಟ್ಟಿಯಾಗಿ ಕೊನೆಗೆ ಮರಣವನ್ನು ತರುತ್ತದೆ. ಕುಡಿತದಿಂದ ಹೊಟ್ಟೆನೋವು ಉದ್ಭವಿಸಿದರೆ ಅದು ಕಡಿಮೆಯಾಗದಿದ್ದಾಗ ಮರಣವೇ ಕೊನೆಯ ಸಾಧನ.

ಕಲಬೆರಕೆ (ಕಲುಷಿತ) ಸರಾಯಿ ಕುಡಿದರೆ ದುರ್ಮರಣಕ್ಕೆ ಈಡಾದ ನೂರಾರು ಜನರ ಕರುಣಾಜನಕ ಸಂಗತಿಗಳನ್ನು ದಿನ

ಪತ್ರಿಕೆಗಳ ಮೂಲಕ ತಿಳಿದುಕೊಂಡಾಗ ನಮ್ಮ ದೇಶದಲ್ಲಿ ಇದರ ಚಟವು ಎಷ್ಟೊಂದು ವ್ಯಾಪಕವಾಗಿ ಹಬ್ಬಿದೆ ಎಂದು ಅನಿಸುವದು. ರಸ್ತೆಯಲ್ಲಿ ಬಿದ್ದು ಅತ್ತಿಂದ ಇತ್ತ ಇತ್ತಿಂದ ಅತ್ತ ಅಲೆದಾಡಿ ಬರುವ ರಸ್ತೆ ವಾಹನಗಳಿಗೆ ಅಪ್ಪಳಿಸಿ ತಮ್ಮ ಪ್ರಾಣವನ್ನೇ ಕಳೆದು ಕೊಳ್ಳುತ್ತಾರೆ. ಅದರಂತೆ ಮೂರ್ಛೆರೋಗ, ದಮ್ಮುವಾದಿಗಳು ಸೇವಿಸಿದರೆ ಅವರಲ್ಲಿ ಶಕ್ತಿಹೀನತೆಯುಂಟಾಗುತ್ತದೆ.

೬೦ ಮಿಲಿ ಲೀಟರ ಅಂದರೆ ಸಾಧಾರಣ ೦.೨ ರಿಂದ ೦.೩ ಪ್ರತಿಶತ ಮದ್ಯ ಸೇವಿಸಿದರೆ ಆ ವ್ಯಕ್ತಿಯು ಮದೋನ್ಮತ್ತ ನಾಗುತ್ತಾನೆ. ೧೨೦ ರಿಂದ ೧೮೦ ಮಿಲಿ ಲೀಟರ ಅಂದರೆ ಶೇಕಡ ೦.೪ ಪ್ರಮಾಣದಲ್ಲಿ ಆಲ್ಕೋಹಾಲನ್ನು ಸೇವಿಸಿದ ವ್ಯಕ್ತಿಯು ತನ್ನ ಬುದ್ಧಿ ಶಕ್ತಿಯ ಮೇಲಿನ ಹತೋಟಿಯನ್ನು ಕಳೆದುಕೊಂಡು ಹುಚ್ಚರಂತೆ ಅಲೆದಾಡುವ ಪ್ರಸಂಗ ಬರುತ್ತದೆ. ಎಲ್ಲ ಕ್ರಿಯೆಗಳು ಅಸಂಬದ್ಧವಾಗಿ ನಡೆದಿರುತ್ತವೆ. ೨೪೦ ಮಿಲಿ ಲೀಟರ ಅಂದರೆ ಸಾಧಾರಣ ಆಲ್ಕೋಹಾಲಿನ ಪ್ರಮಾಣ ಶೇಕಡಾ ೦.೫ ರಿಂದ ೦.೯ ಆದಾಗ ಮನುಷ್ಯನು ಉಸಿರಾಡಿಸುವುದು ಕಠಿಣವಾಗಿ ಅವನು ಈ ಅವಸ್ಥೆಯಲ್ಲಿ ತನ್ನ ಮನಸ್ಸಿನಲ್ಲಿಯ ಗೌಪ್ಯ ವಿಷಯಗಳನ್ನು ಹೊರಗೆಡವುತ್ತಾನೆ. ವಿನಾಕಾರಣ ನಗುವದು, ಚೀರುವದು ಸುರುವಾಗುತ್ತದೆ. ಹೀಗೆ ತನ್ನ ಸ್ವಾಧೀನತೆಯನ್ನು ಪೂರ್ತಿ ಕಳೆದುಕೊಂಡ ಮನುಷ್ಯನು ಜೀವಂತ ಶವವಾಗುತ್ತಾನೆ. ಒಂದು ವೇಳೆ ೩೦೦ ಮಿಲಿ ಲೀಟರ ಅಂದರೆ ಶೇಕಡಾ ೦.೧೫ ಆಲ್ಕೋ ಹಾಲಿನ ಪ್ರಮಾಣ ಇದಕ್ಕಿಂತ ಹೆಚ್ಚಿಗೆ ಮದ್ಯ ಸೇವಿಸಿದ ವ್ಯಕ್ತಿ ಯಾವ ಸಂಜ್ಞೆಗಳು ಇಲ್ಲವಾಗಿ ಅವನು ನಿಸ್ತೇಜಿತನಾಗಿ ಸಾವನ್ನು ಅನುಭವಿಸಲು ತಯಾರಾಗಬೇಕಾಗುತ್ತದೆ.

ಮದ್ಯಪಾನದಿಂದ ಇನ್ನೊಂದು ದುಷ್ಪರಿಣಾಮವೆಂದರೆ ಸಾಮಾನ್ಯ ನಾಗರಿಕರ ಸಮುದಾಯದ ಮೇಲೆ ಆಧಿಯುನ್ನುಂಟು ಮಾಡಿದೆ. ಇಂದಿನ ಜನಾದರಣೀಯ ವ್ಯಾಪಾರಿ ಸಿನಿಮಾಗಳು ಮದ್ಯ ಸೇವನೆಗೆ ಪ್ರೋತ್ಸಾಹ ನೀಡುತ್ತವೆ. ಅಂದರೆ ಕೈಯಲ್ಲಿ ಬ್ರ್ಯಾಂಡಿಯ ಬಾಟ್ಲಿ ಹಿಡಿದುಕೊಂಡು ಠಾಕೂರನ ಪಾತ್ರ ಮಾಡುವ ನಟರು ಕೆಲ ಜನರ ಮೇಲೆ ದುಷ್ಪರಿಣಾಮ ಬೀರಬಲ್ಲರು. ಎಷ್ಟೋ ಕ್ಲಬ್. ಹೊಟೇಲ್ ಮತ್ತು ಕೆಲವು ಓಣಿಗಳಲ್ಲಿ ರಾತ್ರಿಯ ವೇಳೆ ನಡೆಯುವ ಬತ್ತಲೆ ನೃತ್ಯ. ವೇಶ್ಯಾವೃತ್ತಿ. ಮಟಕಾ ಇತ್ಯಾದಿಗಳು ಸುತ್ತಲಿನ ಜನರ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಎಷ್ಟೋ ಹೊಟೇಲ್, ಕ್ಲಬ್‌ಗಳಲ್ಲಿ ಒಳ್ಳೆಯ ಹುಡಿಗಿಯರು ಮದ್ಯವನ್ನು ಸರಬರಾಜು ಮಾಡುವದಲ್ಲದೆ, ಕೊನೆಗೆ ತಾವೇ ವೇಶ್ಯೆಯರಾಗಿ ಲೈಂಗಿಕ ವ್ಯಭಿಚಾರಕ್ಕೂ ಸಿದ್ಧರಾದ ಮೇಲೆ ನಾಗರಿಕ ಸಮುದಾಯ ಕೆಟ್ಟು ಹೋಗುವದರಲ್ಲಿ ಯಾವ ಸಂಶಯ ವಿಲ್ಲ.

ಮದ್ಯಪಾನದಿಂದ ಇಂದಿನ ಸಮಾಜದಲ್ಲಿ ಆಕ್ರಮ,ಅತ್ಯಾಚಾರ. ಅಪಹರಣ, ಆತ್ಮಹತ್ಯೆ. ವಿವಾಹ ವಿಚ್ಛೇದನ, ಬಾಲಾಪರಾಧ, ಕೊಲೆ, ಸುಲಿಗೆ, ದರೋಡೆ ಇಂತಹ ಹೀನ ಕೃತ್ಯಗಳು ದಿನ ದಿನಕ್ಕೆ ಹೆಚ್ಚಾಗಿ ನಡೆಯಿರುವವು. ಒಂದು ವೇಳೆ ಗರ್ಭಿಣಿ ಸ್ತ್ರೀಯು ಮದ್ಯ ಸೇವಿಸುವ ಚಟಗಾರ್ತಿ ಇದ್ದರೆ ಅವಳಿಗೆ ಅಷ್ಟೇ ಮದ್ಯದ ಪರಿಣಾಮವಾಗುವದಲ್ಲದೆ, ಮುಂದೆ ಹುಟ್ಟುವ ಮಗುವೂ ಅಶಕ್ತ ಕುರೂಪಿಯಾಗುವ ಸಂಭವವಿದೆ, ಒಟ್ಟಿನಲ್ಲಿ ಸರ್ವಜ್ಞ ಕವಿಯು ಹೇಳುವಂತೆ,

"ಸುರೆಯ ಹಿರಿದುಂಡವಗೆ ! ಉರಿಯ ಮೇಲ್ಬಿದ್ದುಕುವಗೆ !
ಹರಿಯುವಾ ಹಾವ, ಪರನಾರಿ ಪಿಡಿವಂಗೆ ।
ಮರಣ ಕಾಣಯ್ಯ । ಸರ್ವಜ್ಞ."

ಸುರೆಯನ್ನು ಸೇವಿಸುವವನಿಗೆ, ವಿನಾಶಕಾರಿ ಕಾರ್ಯಗಳಿಗೆ ದುಡುಕುವವನಿಗೆ ಮತ್ತು ಹರಿವ ಹಾವ ಮತ್ತು ಪರಸ್ತ್ರೀಯರನ್ನು ಹಿಡಿಯುವವನಿಗೆ ಮರಣ ಒದಗುವದು ಎಂದು ವಿವರಿಸಲಾಗಿದೆ. ಹೀಗೆ ಆಲ್ಕೋಹಾಲ್ ವ್ಯಕ್ತಿಯನ್ನು ನಿಧಾನವಾಗಿ ಕೊಲ್ಲುವ ವಿಷವಾಗಿದೆ.

ನಮ್ಮ ದೇಶ ಮಾತ್ರವಲ್ಲ ಇಡೀ ಪ್ರಪಂಚದಲ್ಲೇ ಮದ್ಯಪಾನ ವ್ಯಸನಿಗಳ ಅಧಃಪತನವನ್ನು ತಡೆಗಟ್ಟುವದು ಪಾಶ್ಚಿಮಾತ್ಯ ರಾಷ್ಟ್ರಗಳಿಗೂ ಅಭಿವೃದ್ಧಿಶೀಲ ರಾಷ್ಟ್ರಗಳಿಗೂ ಎದುರಾಗುವ ಅತ್ಯಂತ ಗಂಭೀರವಾದ ಸಮಸ್ಯೆಯಾಗಿದೆ. ಯಾಕೆಂದರೆ ಒಂದು ರಾಜಕೀಯ ಪಕ್ಷ ಅಥವಾ ಸರಕಾರ ಮದ್ಯ ಕುರಿತು, ಅದರ ಉತ್ಪಾದನೆ ಕುರಿತು ತಾಳುವ ನಿಲುವು ಆ ಪಕ್ಷದ ಅಥವಾ ಸರಕಾರದ ಉಳಿವು ಅಥವಾ ಅಳಿಯನ್ನು ನಿರ್ಧರಿಸುವಷ್ಟು ಸಮರ್ಥವಾಗಿದೆ.

ಸಮಾಜ ತಾನೇ ಮುಂದಾಗಿ ಪಾನ ನಿರೋಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಲ್ಲಿ ಮುಂದಾಗಬೇಕು. ಆದರೆ ನಾಲ್ಕು ಮುಖ್ಯ ಕಾರಣಗಳಿಗಾಗಿ ರಾಜ್ಯಗಳು ಪಾನ ಪ್ರತಿಬಂಧ ಕಾರ್ಯಗತ ಮಾಡಲು ಉದಾಶೀನವಾಗಿವೆ ಎಂದು ವ್ಯಕ್ತವಾಗುತ್ತದೆ. ೧) ಆದಾಯ ಕಳೆದುಕೊಳ್ಳುವಿಕೆ. ೨) ಕಳ್ಳಭಟ್ಟಿ ಸರಾಯಿ ತಯಾರಿಕೆ ೩) ಕಳ್ಳ ಸಾಗಾಟ. ೪) ಅನಾಹುತಗಳಿಗೆ ಅಪ್ರತ್ಯಕ್ಷ ಸಹಾಯ

ಹೊಸದಿಲ್ಲಿಯ 'ಪಂಚತಾರಾ' ಹೋಟೇಲುಗಳಲ್ಲಿ ಮದ್ಯ ನೀಡಿಕೆ ಪ್ರತಿಬಂಧಿಸಲ್ಪಟ್ಟಿದ್ದಾರೆ. ಸರಕಾರ ಪ್ರತಿ ವರ್ಷ ನಾಲ್ಕು ಕೋಟಿ ರೂಪಾಯಿ ಹಾನಿ ಮಾಡಿಕೊಳ್ಳಬೇಕಾಗುವದು. ಅದಕ್ಕೆ ಪ್ರವಾಸೋದ್ಯಮ ಶಾಖೆಯಿಂದ ಮದ್ಯ ಕುಡಿಯುಲು ಅನುಮತಿ ನೀಡಲಾಯಿತು, ಇಂದು ಜಮ್ಮು ಕಾಶ್ಮೀರದಂತಹ ರಾಜ್ಯಗಳು, ಚಿಕ್ಕ ಕೇಂದ್ರ ಶಾಸಿತ ಪ್ರದೇಶ ಗೋವಾ ಇವು ಮದ್ಯದ ಉದ್ಯಮದ ಮೇಲೆ ಅವಲಂಬಿಸಿದ್ದರಿಂದ ಯಾವದೇ ಪ್ರತಿಬಂಧಗಳು ಈ ರಾಜ್ಯಗಳಿಗೆ ಸ್ವಾಗತವಿಲ್ಲ.

ಮಣಿಪುರ ಎಂಬಲ್ಲಿ ಹೆಣ್ಣು ಮಕ್ಕಳೇ ಮುಂದಾಗಿ ತಮ್ಮಲ್ಲಿಯೇ ಒಂದು ಒಕ್ಕೂಟವನ್ನು ಮಾಡಿಕೊಂಡು ಸೆರೆ, ಸಿಂದಿಯ ಅಂಗಡಿಗಳ ಮುಂದೆ ರಾತ್ರಿಯಲ್ಲಿಯೂ ಧರಣೆ ಹೂಡು ವದು ಮತ್ತು ಕುಡುಕರನ್ನು ಪೋಲಿಸರ ವಶಕ್ಕೆ ಕೊಡುವದು ನಡೆಯುತ್ತದೆ. ದೆಹಲಿ ಹರಿಯಾನಾ ಮಾರ್ಗದಲ್ಲಿ ಮದ್ಯಪಾನದ ಅಂಗಡಿಗಳನ್ನು ಪ್ರಾರಂಭಿಸುವದಕ್ಕೆ ಮಹಿಳೆಯರೇ ಪ್ರತಿಭಟಿಸಿ ದರು. ಆಗ ಸರಕಾರ ಮಹಿಳೆಯರ ಪ್ರತಿಭಟನೆಗೆ ಶರಣಾಗ ಬೇಕಾಯಿತು. ಸರಕಾರ ಮದ್ಯದ ಅಂಗಡಿಯನ್ನು ೨ ಕಿ. ಮೀ. ದೂರಕ್ಕೆ ಸ್ಥಳಾಂತರಿಸಬೇಕು ಎಂದು ಸಲಹೆ ನೀಡಿತು. ಆದರೆ ಆ ಮಹಿಳೆಯರು ಒಪ್ಪಲಿಲ್ಲ. ಜಿಲ್ಲೆಯಲ್ಲಿ ಮದ್ಯದ ಅಂಗಡಿಗಳು ಬೇಡವೆ ಬೇಡ ಎಂದು ಆಂದೋಲನದ ಮುಖಂಡರು ಗರ್ಜಿಸಿ ದರು.[1]

---

1 ಕನ್ನಡಮ್ಮ ದಿನಪತ್ರಿಕೆ, ದಿ. ೨೮-೧೧-೮೮

ಮದ್ಯಪಾನ ವ್ಯಸನಿಗಳನ್ನು ಸಮೂಹ ಚರ್ಚೆ ಮತ್ತು ಸಂಘಟನೆಗಳಿಂದ ವ್ಯಸನ ಮುಕ್ತರನ್ನಾಗಿಸುವ ಉತ್ತಮ ಧ್ಯೇಯ ಹೊತ್ತು ಅಸ್ತಿತ್ವಕ್ಕೆ ಬಂದುದು 'ಅನಾಮಿಕ ಅಮಲುಕೋರರ ಸಂಘ' ವಿಶ್ವದಾದ್ಯಂತ ಬೆಳೆಯುತ್ತಿರುವ ಇಂಥ ಸಂಘಗಳು ಭಾರತದಲ್ಲೂ ಕಾರ್ಯಪ್ರವೃತ್ತವಾಗಿವೆ. ಕರ್ನಾಟಕದಲ್ಲೂ ಈ ಸಂಸ್ಥೆ ಅಮಲುಕೋರರನ್ನು ಸುಧಾರಿಸುವ ಹಾದಿಯಲ್ಲಿ ಪ್ರಗತಿದಾಯಕ ಹೆಜ್ಜೆಗಳನ್ನು ಇರಿಸಿದೆ. ಮಂಗಳೂರಿನ ಸನಿಹದ ಉಡುಪಿ, ಸುರತ್ಕಲ್, ಸಾರಾಪಿ ಮತ್ತು ಪುತ್ತೂರಿನಲ್ಲಿ ಇದರ ಗುಂಪುಗಳು ಕಾರ್ಯ ಪ್ರಾರಂಭಿಸಿವೆ. ಕುಡುಕರ ಮನಒಲಿಸಲು, ಹೆಚ್ಚು, ಹೆಚ್ಚು ಸಂಖ್ಯೆಯಲ್ಲಿ ಜನಜಾಗೃತಿ ಉಂಟು ಮಾಡಿ, ಮದ್ಯಪಾನದಿಂದಾಗುವ ಹಾನಿಯನ್ನು ಮನ ಮುಟ್ಟುವಂತೆ ತಿಳಿಸಿ, ಕುಡಿಯುವುದನ್ನು ಬಿಟ್ಟು ಪುರುಷರು ಮತ್ತು ಸ್ತ್ರೀಯರು ಪರಸ್ಪರ ಒಲವಿನ ಒಡನಾಡಿತನವೇ 'ಅನಾಮಿಕ ಅಮಲುರೋಗಿಗಳು' Alcoholics Anonymous ಎಂಬ ಸಂಘ. ಈ ದಿಸೆಯಲ್ಲಿ ಕೆಲಸ ಮಾಡುತ್ತಿದೆ. ಇದರ ಸದಸ್ಯರಾಗಬೇಕಾದರೆ ಇರಬೇಕಾದ ಏಕೈಕ ಅರ್ಹತೆ ಎಂದರೆ ಸೆರೆ ಕುಡಿತವನ್ನು ಕೈಬಿಡಬೇಕೆಂಬ ಹಂಬಲ. ಈ ಅನಾಮಿಕ ಅಮಲುಕೋರರ ಸಂಘ, ಪ್ರತಿ ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ತನ್ನ ಶಾಖೆಗಳನ್ನು ಆರಂಭಿಸಿ ಜನರಲ್ಲಿ ಐಕ್ಯ, ಪ್ರಗತಿ, ಚೇತರಿಕೆಯ ತತ್ವಗಳನ್ನು ಮನಮುಟ್ಟುವಂತೆ ಕುಡುಕರಿಗೆ ಬೋಧಿಸಿದರೆ ಮಾತ್ರ ಕುಡಿತದ ಪ್ರಮಾಣ ಕಡಿಮೆಯಾಗಬಲ್ಲದು.

"ಪಾನ ನಿಷೇಧ ವಿಚಾರಣಾ ಸಮಿತಿ" ಈ ಕೆಳಕಂಡ ಸೂಚನೆಗಳನ್ನು ಕೊಟ್ಟಿತು. ಅವುಗಳಲ್ಲಿ ಮುಖ್ಯವಾದವುಗಳೆಂದರೆ :[2].

2 ಕೆ. ಸಿಂಗ್ "ಅಪರಾಧ ಮತ್ತು ಸಾಮಾಜಿಕ ಸಮಸ್ಯೆಗಳು"

೧) ಇಡೀ ಭಾರತದಲ್ಲಿ ಪಾನನಿಷೇಧ ಜಾರಿಯಲ್ಲಿ ತರುವದು.

೨) ಪಾನನಿಷೇಧ ಕಾರ್ಯಕ್ರಮ ಕುರಿತು ರಾಜ್ಯ ಸರಕಾರಗಳು ಸಂಬಂಧಿಸಿದ ಕಾನೂನು ಜಾರಿಯಲ್ಲಿ ತರಬೇಕು.

೩) ಸಾರ್ವಜನಿಕ ಸ್ಥಳಗಳಾದ ಹೊಟೇಲ್, ಬಾರ್, ರೆಸ್ಟೊರೆಂಟ್, ಕ್ಲಬ್ ಮತ್ತು ಕೂಟಗಳಲ್ಲಿ ಸಂಪೂರ್ಣ ಕುಡಿತವನ್ನು ತಡೆಗಟ್ಟುವದು.

೪) ಸರಕಾರಿ ನೌಕರರಿಗೆ ಮದ್ಯಪಾನ ಕುಡಿತವನ್ನು ಪೂರ್ತಿ ತಡೆಯುವದು. ಈ ನಿಯಮಗಳನ್ನು ಸೇವಾ ನಿಯಮಾವಳಿಯಲ್ಲಿ ಸೇರ್ಪಡೆ ಮಾಡುವದು.

೫) ಹಳ್ಳಿ ಮತ್ತು ಪಟ್ಟಣ ಪ್ರದೇಶದಲ್ಲಿ ಸರಾಯಿ ಅಂಗಡಿಗಳನ್ನು ಕಡಿಮೆ ಮಾಡುವದು.

೬) ಮಾರ್ಚ ೧೯೫೯ ರ ನಂತರ ಸಮಿತಿ ಅಭಿಪ್ರಾಯದ ಪ್ರಕಾರ 'ಅಫು' ಎಂಬ ಮಾದಕ ದ್ರವ್ಯದ ಪೂರೈಕೆಯನ್ನು ನಿಲ್ಲಿಸುವದು.

೭) ಹೆಂಪ್ ಎಂಬ ಮಾದಕ ದ್ರವ್ಯ (ಪುಂಡಿಗಿಡ) ವನ್ನು ಬಳಕೆಗೆ ತಕ್ಕಂತೆ ಸಮಿತಿಯ ಆಜ್ಞೆಯ ಪ್ರಕಾರ ಇದರ ಪೂರೈಕೆಯನ್ನು ನಿಲ್ಲಿಸುವದು.

೮) ಶಿಕ್ಷಣ ಪ್ರಚಾರ ಮಾಧ್ಯಮದಿಂದ ಮಣಿಪುರ, ತ್ರಿಪುರಾ ಪ್ರದೇಶಗಳನ್ನು ಹೊರತುಪಡಿಸಿ ಎಲ್ಲೆಡೆಯಲ್ಲಿ ಪಾನನಿಷೇಧ ಜಾರಿಯಲ್ಲಿ ತರುವದು.

೯) ಮದ್ಯದ ಬಾರ್‌ಗಳಲ್ಲಿ ವಿದೇಶಿ ಪ್ರವಾಸಿಗರು ಸಹ ಮದ್ಯ ಸೇವಿಸಬಾರದು.

೧೦) ಆರೋಗ್ಯದ ದೃಷ್ಟಿಯಿಂದ ಸೆರೆಗೆ ಪರಮಿಟ್ ಕೊಡಲಾಗುವದಿಲ್ಲ.

೧೧) ಪಾನನಿಷೇಧವನ್ನು ಶೈಕ್ಷಣಿಕ, ಪ್ರತಿಬಂಧಕ, ಕಾನೂನಾತ್ಮಕ ಮತ್ತು ಆಡಳಿತಾತ್ಮಕ ಪದ್ಧತಿಯಿಂದ ಜಾರಿಯಲ್ಲಿ ತರುವದು.

೧೨) ಪಾನನಿಷೇಧ ಕುರಿತು ಆಯಾ ರಾಜ್ಯಕ್ಕೆ ಒಬ್ಬ ಆಡಳಿತಾಧಿಕಾರಿಯನ್ನು ನಿಯಮಿಸುವದು. ಮತ್ತು ಪ್ರತಿ ಜಿಲ್ಲೆಗೆ ಪಾನನಿಷೇಧ ಸಮಿತಿಯನ್ನು ನಿಯಮಿಸುವದು.

೧೩) ಪೋಲೀಸರಿಗೆ ಪಾನನಿಷೇಧವನ್ನು ಜಾರಿಯಲ್ಲಿ ತರಲು ಹೆಚ್ಚಿನ ಅಧಿಕಾರವನ್ನು ಒದಗಿಸುವದು.

೧೪ ಕಾಯ್ದೆ ದೃಷ್ಟಿಯಿಂದ ಪಾನನಿಷೇಧವನ್ನು ಮತ್ತು ಇದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಬಿಗುವುಗೊಳಿಸುವದು.

೧೯೬೩ ರ ಜನೆವರಿ ತಿಂಗಳು ದೆಹಲಿಯಲ್ಲಿ ಸೇರಿದ ಮುಖ್ಯ ಮಂತ್ರಿಗಳ ಸಭೆಯು 'ಮದ್ಯಪಾನ ನಿಷೇಧ' ಕಾಯ್ದೆಗಳನ್ನು ಸಡಿಲಿಸಬಾರದೆಂಬ ತೀರ್ಮಾನಕ್ಕೆ ಬಂದಿತು. ೧೯೭೫ ರ ಅಕ್ಟೋಬರ ೨ ಗಾಂಧೀ ಜಯಂತಿ ದಿನ, ಪಾನನಿಷೇಧಕ್ಕೆ ಸಂಬಂಧಪಟ್ಟ ೧೨ ಅಂಶಗಳ ರಾಷ್ಟ್ರೀಯ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಅವು ಇಂತಿವೆ :

೧) ಮದ್ಯ ಮಾರಾಟ ಹಾಗೂ ಪ್ರೋತ್ಸಾಹಕ್ಕೆ ಸಂಬಂಧಿಸಿದ ಪ್ರಚಾರ ನಿಲ್ಲಿಸುವದು.

೨) ಸಾರ್ವಜನಿಕ ಸ್ಥಳಗಳಾದ ಹೊಟೇಲ್, ಕ್ಲಬ್ ಇತ್ಯಾದಿ ಸ್ಥಳಗಳಲ್ಲಿ ಕುಡಿತದ ನಿರ್ಬಂಧನ ಹೇರಬೇಕು.

೩) ಔದ್ಯೋಗಿಕ ಕೇಂದ್ರ, ನೀರಾವರಿ ಪ್ರದೇಶ ಅಭಿವೃದ್ಧಿಗೊಳ್ಳುವ ಪ್ರದೇಶಗಳಲ್ಲಿ ಮದ್ಯದ ಅಂಗಡಿಗಳನ್ನು ತೆಗೆಯದಂತೆ ನೋಡಿಕೊಳ್ಳುವದು.

೪) ರಾಷ್ಟ್ರೀಯ ಹೆದ್ದಾರಿ, ವಾಸಸ್ಥಳ, ಶಾಲೆ, ಧಾರ್ಮಿಕ ಸ್ಥಳ, ಕಾರ್ಮಿಕ ವಸತಿ ಇವುಗಳ ಹತ್ತಿರ ಮದ್ಯದ ಅಂಗಡಿಗಳನ್ನು ತೆಗೆಯದಂತೆ ಎಚ್ಚರ ವಹಿಸಬೇಕು.

೫) ಪಗಾರ (ವೇತನ) ದಿನ ಒಣ ದಿನವೆಂದು ಸಾರುವದು.

೬ ವಾಹನ ಚಾಲಕರು ಕುಡಿದು ವಾಹನಗಳನ್ನು ನಡೆಸದಂತೆ ಎಚ್ಚರಿಕೆ ವಹಿಸುವದು. ತಪ್ಪಿದಲ್ಲಿ ಅವರ ಲೈಸನ್ಸ್ ಕಸಿದುಕೊಳ್ಳುವದು.

೭) ಸರಕಾರಿ ನೌಕರರು ಕುಡಿದು ಕೆಲಸಕ್ಕೆ ಬರದಂತೆ ನೋಡಿಕೊಳ್ಳುವದು. ಅವಿಧೇಯರಿಗೆ ಶಿಕ್ಷೆ ವಿಧಿಸುವದು.

೮) ಹೆಚ್ಚು ಹಣ ಗಳಿಸುವ ಉದ್ದೇಶದಿಂದ ಹೊಸದಾಗಿ ಮದ್ಯದ ಅಂಗಡಿಗಳನ್ನು ತೆಗೆಯದಂತೆ ನೋಡಿಕೊಳ್ಳುವದು.

೯) ಮದ್ಯ ಉತ್ಪಾದನೆಗಾಗಿ ಹೊಸ ಲೈಸನ್ಸ್ ಕೊಡಬಾರದು.

೧೦) ಕಾನೂನುಗಳನ್ನು ಎಚ್ಚರಿಕೆಯಿಂದ ಜಾರಿಯಲ್ಲಿ ತರುವದು.

೧೧ ಸರಕಾರಿ ಹಾಗೂ ಸರಕಾರೇತರ ಸಂಘ, ಸಂಸ್ಥೆಗಳಿಂದ ಸಾರ್ವಜನಿಕರಿಗೆ ಮದ್ಯಪಾನದಿಂದಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿ ಹೇಳಲು ಪ್ರಯತ್ನಿಸುವದು,

೧೨) ಸಾರ್ವಜನಿಕ ರಂಗಕ್ಕೆ ಸಂಬಂಧಪಟ್ಟ ನಾಯಕರು, ತಮ್ಮ ವೈಯಕ್ತಿಕ ವರ್ಚಸ್ಸಿನಿಂದ ಜನರು ಮದ್ಯ ಸೇವಿಸದಂತೆ ನೋಡಿಕೊಳ್ಳುವದು.[1]

---

೧ ಎಚ್. ಬಿ. ಮಾಳಿ 'ಭಾರತೀಯ ಸಾಮಾಜಿಕ ವಿಘಟನೆ'

೧೦ ಗಾಂಧೀಜಿಯು ದೃಷ್ಟಿಯಲ್ಲಿ ಕುಡಿತ

ಮಹಾತ್ಮ ಗಾಂಧೀಜಿಯವರು ಭಾವಿಸಿದಂತೆ ಇಂದು ನಮ್ಮ ಭಾರತದಲ್ಲಿ ಪಿಡುಗಿನಂತೆ ಹಬ್ಬಿಕೊಂಡಿರುವ ಈ ಮದ್ಯಪಾನವು ಮಾನವನ ಸರ್ವನಾಶ ದುರಂತಕ್ಕೆ ಕಾರಣವಾಗಿದೆ. ಮದ್ಯಪಾನ ಸಮಸ್ಯೆಯು ಒಂದು ಬೆಳೆಯುತ್ತಿರುವ ಸಾಮಾಜಿಕ ದುಷ್ಟ ಪದ್ಧತಿಯಾಗಿದೆ. ಅದಕ್ಕೆ ಭಾರತವನ್ನು ಕುಡಿತವಿಲ್ಲದ ಬಲವಂತವಾದ ರಾಷ್ಟ್ರವನ್ನಾಗಿ ಮಾಡಿ, ಕುಡಿಯುವವರಿಗೆ ಅವಕಾಶ ವಿಲ್ಲದಂತೆ ಮಾಡಲು ನಾನು ಸದಾ ಇಚ್ಛಿಸುತ್ತೇನೆ. ಇಂತಹ ಅನಿಷ್ಟ ಕೃತ್ಯಗಳಿಗೆ ನಮ್ಮ ಭಾರತವು ಎಂದೆಂದೂ ಪ್ರೋತ್ಸಾಹ ನೀಡಬಾರದೆಂದು ಗಾಂಧೀಜಿಯವರು ಹೇಳಿದರು.

ಭಾರತದಲ್ಲಿ ಕೆಲವು ಜನರು ಬಡತನವೆಂಬ ದಾಹದಿಂದ, ತಿನ್ನಲು ತುತ್ತು ಅನ್ನ, ತುಂಡು ಬಟ್ಟೆಗೆ ಗತಿ ಇಲ್ಲದಂದೆ ಇದ್ದಾಗ ಸ್ತ್ರೀ ಮತ್ತು ಪುರುಷರು ಚಿಕ್ಕಪುಟ್ಟ ಕಳ್ಳತನ ಮಾಡಿ ಹೇಗೋ ಹಸಿವೆಯನ್ನು ಹಿಂಗಿಸಿಕೊಳ್ಳಬಹುದು. ಅದು ಅಲ್ಲದೆ ಕೆಲವರು ಶಿಕ್ಷೆಗೆ ಒಳಪಡಬಹುದು. ಆದರೆ ಇವೆಲ್ಲವುಗಳಿಗಿಂತ ಅತೀ ಕೆಟ್ಟೆಂದರೆ ಮದ್ಯಪಾನ ಮತ್ತು ಮಾದಕವಸ್ತುಗಳ ಸೇವನೆಯಾಗಿದೆ. ಮದ್ಯಪಾನವೆಂದರೆ ಪ್ರಜ್ವಲಿಸುವ ಬೆಂಕಿ ಇದ್ದಂತೆ, ದೇಹವನ್ನು ನಾಶ ಮಾಡದೇ ಬಿಡಲಾರದು. ಇದು ಕುಡುಕನ ಮೆದುಳು ಮತ್ತು ಆರೋಗ್ಯವನ್ನು ಕೆಡಿಸುವದು. ಕಟ್ಟಕಡೆಗೆ ಮರಣ ಸಂಭವಿಸುವದು ಎಂದು ಗಾಂಧೀಜಿಯವರು ಎಚ್ಚರಿಕೆ ನೀಡಿದ್ದಾರೆ.

ಹಿಂದೂ ಮತ್ತು ಇಸ್ಲಾಂ ಧರ್ಮಗಳಲ್ಲಿ ಮದ್ಯಪಾನಕ್ಕೆ ಸಾಕಷ್ಟು ಬಂಧನಗಳಿವೆ. ಅದರಲ್ಲಿ ನಮ್ಮ ಭಾರತ ಭೌಗೋಲಿಕ ಪರಿಸರದಿಂದ ನೋಡಿದರೆ ಇದು ಉಷ್ಣಪ್ರದೇಶ, ಶೀತಪ್ರದೇಶ ಗಳ ವಿಷಯ ಏನೇ ಇರಲಿ, ಆದರೂ ಭಾರತದಲ್ಲಿ ಮದ್ಯ ಪಾನದ ಹವ್ಯಾಸ ಅವಶ್ಯವಾಗಿಲ್ಲ. ಈ ಕುಡಿತವನ್ನು ಕಡಿಮೆ ಮಾಡಲು ಒಮ್ಮೆಲೇ ಯಾವ ಸರಕಾರಕ್ಕೂ ಸಾಧ್ಯವಾಗದಿದ್ದರೂ ಪ್ರತಿಯೊಬ್ಬ ಮದ್ಯಪಾನದ ಚಟಗಾರನಿಂದಲೇ ಪ್ರಯತ್ನ ನಡೆಯ ಬೇಕು. ಅಂದರೆ ಈ ದುಷ್ಟ ಪದ್ಧತಿಯಿಂದ ಪಾರುಮಾಡಬಹುದು. ಕುಡುಕನ ಅಂತರಂಗವನ್ನು ಭೇದಿಸದ ಹೊರತು ಯಾರೂ ಯಾವ ಪಾನನಿರೋಧ ಮಾಡಲು ಬರುವಂತಿಲ್ಲ ಮತ್ತು ಅದಕ್ಕೆ ವಿರೋಧ ವಾಗಿ ಬೇರೆ ಪಾನೀಯಗಳನ್ನು ಉಪಯೋಗಿಸಿ ಕುಡಿತವನ್ನು ಕಡಿಮೆ ಮಾಡಬಹುದು ವಿನಃ ಬೇರೆ ಯಾವ ಮಾರ್ಗವಿಲ್ಲ ಎಂದು ಗಾಂಧೀಜಿಯವರು ಹೇಳಿದ್ದಾರೆ. ರಹದಾರಿ ಮತ್ತು ದೊಡ್ಡ ರಾಷ್ಟ್ರೀಯ ಹೆದ್ದಾರಿಗಳ ಬದಿಯಲ್ಲಿ ಹೆಂಡ, ಮದ್ಯ ಮಾರುವ ಹಕ್ಕನ್ನು ಸರಕಾರ ನೀಡಬಾರದು.

ಇಂದು ರಾಜ್ಯ ಮತ್ತು ಕೇಂದ್ರ ಸರಕಾರಗಳು ಅಬಕಾರಿ ಯಿಂದ ಬರತಕ್ಕ ಆದಾಯವನ್ನು ಲೆಕ್ಕಿಸಬಾರದು! ಯಾಕೆಂದರೆ ಈ ಪಾನ ಮತ್ತು ಮಾದಕ ವಸ್ತುಗಳಿಂದ ಬರುವ ಆದಾಯ ಅತ್ಯಂತ ಕೀಳು ತೆರಿಗೆಯ ವಿಧಾನವೆಂಬುದನ್ನು ಗಮನದಲ್ಲಿರಿಸಬೇಕು. ಆದರೆ ಇಂದಿನ ರಾಜ್ಯ ಸರ್ಕಾರಗಳ ಆದಾಯ ತೆರಿಗೆ ನಷ್ಟವಾಗುತ್ತ ದೆಂಬುದು ಕೇವಲ ಒಂದು ತೋರಿಕೆ. ಅನೀತಿ, ದುಷ್ಟವೃತ್ತಿಗೆ ಬಲಿಯಾಗುತ್ತಿರುವ ಈ ಕುಡುಕರ ಅನಾವಶ್ಯಕ ಖರ್ಚು ನಿಯಂತ್ರಿ ಸಲ್ಪಟ್ಟರೆ ಇಲ್ಲವೆ ಒಟ್ಟು ಕುಡುಕರ ಯಾದಿಯನ್ನು ಮಾಡಿ

ಪ್ರತ್ಯೇಕವಾಗಿ ಹೆಚ್ಚಿನ ತೆರಿಗೆ ಒಹಿಸಿದರೆ ಈ ಅಮೋಘ ಲಾಭದ ಜೊತೆಗೆ ರಾಷ್ಟ್ರಕ್ಕೆ ದೊಡ್ಡ ಪ್ರಮಾಣದ ಆರ್ಥಿಕ ಲಾಭವೂ ಆಗುವದು.

ಭಾರತ ಸರಕಾರವು ಮನಸ್ಸು ಮಾಡಿದರೆ ಇಡೀ ರಾಷ್ಟ್ರ ದಿಂದ ಈ ಅಮಲು ರೋಗವನ್ನು ಉಚ್ಚಾಟನೆ ಗೈಯಲು ಬಹಳಷ್ಟು ಸಾಧ್ಯತೆಗಳಿವೆ. ಒಂದುವೇಳೆ ಈ ರಾಷ್ಟ್ರದಲ್ಲಿ ಪಾನನಿರೋಧ ಕಾಯ್ದೆ ಜಾರಿಯಲ್ಲಿ ಬಂದಾಗ ಕಳ್ಳಭಟ್ಟಿಯಿಂದ ಮದ್ಯ ತಯಾರಿ ಸುವ ಪದ್ಧತಿ ತಲೆಯೆತ್ತಿ ನಿಂತರೆ ಅದೇನು ಸರಕಾರಕ್ಕೆ ಅಸಾಧ್ಯವಲ್ಲ. ಯಾಕೆಂದರೆ ಭಾರತವು ಅಮೇರಿಕೆಯಲ್ಲ. ಇಲ್ಲಿ ಕುಡುಕರ ಸಂಖ್ಯೆ ಪಾಶ್ಚಿಮಾತ್ಯ ರಾಷ್ಟ್ರಗಳಿಗಿಂತ ಕಡಿಮೆ ಇರುವದು. ಭಾರತದಲ್ಲಿ ಪಾನನಿಷೇಧವನ್ನು ಆಚರಣೆಗೆ ತರುವದು ಸುಲಭವಾಗಿದೆ, ಎಂದು ಗಾಂಧೀಜಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಕುಡಿತದ ಕೆಡಕುಗಳ ಯಾದಿಯನ್ನು ಮಾಡಿ ಪ್ರತಿಯೊಬ್ಬರು ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡುವ ಅಧ್ಯಾಪಕರೂ ಮತ್ತು ವಿದ್ಯಾರ್ಥಿಗಳೂ ತಮ್ಮ ಸಮಯದ ಸ್ವಲ್ಪ ಭಾಗವನ್ನು ವಿನಿ ಯೋಗಿಸಿ ಭಾರತಕ್ಕೆ ಅಂಟಿಕೊಂಡಿರುವ ಈ ಪಿಡುಗನ್ನು ಬಿಡಿಸಿ ಪಾನನಿರೋಧ ಪ್ರಚಾರ ಕಾರ್ಯದಲ್ಲಿ ತೊಡಗುವರೆಂದು ಗಾಂಧೀಜಿಯವರು ಇಚ್ಛಿಸಿದ್ದಾರೆ.[1]

ನಿರ್ಣಯ : "ಈ ಅಮಲುರೋಗಕ್ಕೆ ಔಷಧೋಪಚಾರಕ್ಕಿಂತ ಪ್ರತಿಬಂಧಕೋಪಾಯವೇ ಶ್ರೇಷ್ಠ" ಎಂಬುದು ನಮ್ಮ ವಿಚಾರ. "Prevention is better than Cure" ಎಂಬಾತೆ ವ್ಯಕ್ತಿ

1 "ಭಾವಜೀವಿ" ಗಾಂಧೀ ವಿಚಾರ ದರ್ಶನ

ಅಲ್ಕೋಹಾಲ್ ಚಟಕ್ಕೆ ಬಿದ್ದ ಮೇಲೆ ಯಾವ ಚಿಕಿತ್ಸೆ ಇರುವದಿಲ್ಲ, ಆತನ ಕುಡಿತ ಬಿಡಿಸಲು, ಆರೋಗ್ಯವಂತನನ್ನಾಗಿ ಮಾಡಲು ಸಾಧ್ಯವಿದೆ. ಆದರೆ ಇದು ಕಠಿಣ ಮಾರ್ಗ. ಯಾಕೆಂದರೆ ಆತನಿಗೆ ಚಟ ಬಿಡಲು ಪ್ರಾಮಾಣಿಕ ಆಸೆ ಬೇಕು. ಆತನ ಮನೆಯುವರು, ಸಂಬಂಧ ಪಟ್ಟವರು ಸಹಕರಿಸಬೇಕು. ಪರಿಸರ ಆತನಿಗೆ ಆಸರ ಮತ್ತು ಕುಡಿತ ಕಡಿಮೆ ಮಾಡಲು ಪ್ರೋತ್ಸಾಹ ಕೊಡಬೇಕು. ಅಂದರೆ ಮಾತ್ರ ಈತನ ಅಮಲುರೋಗ ವಾಸಿಯಾಗಬಲ್ಲುದು. ಈ ದಿಸೆಯಲ್ಲಿ ವೈದ್ಯರು, ಮನೋವೈದ್ಯಕೀಯ ಘಟಕಗಳು ಮತ್ತು ಮಾನಸಿಕ ಆಸ್ಪತ್ರೆಗಳ ವೈದ್ಯರು, ಕುಡುಕರ ಮನ ಪರಿವರ್ತನೆಗೆ ನೆರವಾಗಬಲ್ಲರು. ಪುಷ್ಟಿ ಹಾಗೂ ನೆಮ್ಮದಿ ತರುವ ಆಹಾರ, ಮನಸ್ಸಿಗೆ ನೆಮ್ಮದಿ ತರುವ ಮನೋಚಿಕಿತ್ಸೆ, ಹೀಗೆ ಎಲ್ಲ ವ್ಯವಸ್ಥೆಯುನ್ನು ಮಾಡಲು ಬರಬಹುದು. ಆದರೆ ಸೆರೆ, ಸಿಂದಿ ಕುಡಿಯುವ ಚಟ ಕಲಿತು ಅದರಿಂದ ಬಿಡುಗಡೆ ಹೊಂದಲು ಕಷ್ಟಸಾಧನೆ ಮಾಡುವ ಬದಲು ಮುಂಚಿತವಾಗಿ ಪ್ರತಿಬಂಧ ಕೋಪಾಯದ ಮಂತ್ರವೇ ಶ್ರೇಷ್ಠವಾಗಿದೆ.

ಮದ್ಯಪಾನ ನಿರೋಧ ಕಾರ್ಯಕ್ರಮವನ್ನು ಹೆಚ್ಚಿನ ಸಂಖ್ಯೆಯಲ್ಲಿ ಜಾರಿಗೊಳಿಸಬೇಕು. ಜನ ಜಾಗ್ರತಿ ಉಂಟು ಮಾಡಿ, ಮದ್ಯಪಾನದಿಂದಾಗುವ ಹಾನಿ ಮತ್ತು ಅಪರಾಧವನ್ನು ತಡೆಗಟ್ಟಲು ಜನರಿಗೆ ಮನಮುಟ್ಟುವಂತೆ ತಿಳಿಸಲು ಸರಕಾರ, ರಾಜಕಾರಣಿಗಳು ಸಮಾಜ ಸುಧಾರಕರು, ಮನೋವೈದ್ಯರು, ಶಿಕ್ಷಕರು, ಸಮಾಜದ ಗುರುಹಿರಿಯರು ಮುಂದಾಗಿ ಮದ್ಯಪಾನ ಮತ್ತು ಮಾದಕ ದ್ರವ್ಯಗಳ ದುಷ್ಪ್ರವೃತ್ತಿಗಳ ಬಗ್ಗೆ ಮಾರ್ಗದರ್ಶನ ಮಾಡಬೇಕು ಅಂದರೆ ಮಾತ್ರ ಇಡೀ ರಾಷ್ಟ್ರದಿಂದ ಈ ಅಮಲುರೆಜೇಗವನ್ನು ನಾಶಪಡಿಸಲು ಸಾಧ್ಯವಾಗಬಹುದು.

೧೧ ಸಲಹೆಗಳು

ಮದ್ಯಪಾನ ನಿರ್ಮೂಲನೆಯಾಗದ ಹೊರತು ಈ ದೇಶದ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಒಂದುವೇಳೆ ಜಗತ್ತಿನ ಇತರ ರಾಷ್ಟ್ರಗಳಂತೆ ಭಾರತವನ್ನು ಬಲಾಢ್ಯ ರಾಷ್ಟ್ರವನ್ನಾಗಿ ನಿರ್ಮಾಣ ಮಾಡಬೇಕಾದರೆ, ಔದ್ಯೋಗೀಕರಣ, ವೈಜ್ಞಾನಿಕ, ತಂತ್ರಜ್ಞಾನದಿಂದ ಸಮರ್ಥವಾದ ಸ್ಥಿತಿಯನ್ನು ಹೊಂದಬೇಕಾದರೆ, ಭಾರತದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಮದ್ಯಪಾನ ನಿರ್ಮೂಲನೆಯ ಕುರಿತು ಕೆಲವು ಸಲಹೆ, ಸೂಚನೆಗಳನ್ನು ಅನುಷ್ಠಾನಕ್ಕೆ ತರಬೇಕು. ಅವು ಈ ಕೆಳಗಿನಂತೆ ಇವೆ :

೧) ಮದ್ಯಪಾನವೆಂಬುದು ಇಂದಿನ ಪ್ರಸ್ತುತ ರಾಷ್ಟ್ರಕ್ಕೆ ಒಂದು ವಿಷಮ ರೋಗದಂತೆ ಹಬ್ಬಿಕೊಂಡಿದ್ದು, ಸುಲಭ ಮಾರ್ಗದಿಂದ ಇದನ್ನು ಪೂರ್ಣ ನಿಷೇಧ ಮಾಡುವದಾಗದಿದ್ದರೂ ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಬೇಕು.

೨) ಇಡೀ ರಾಷ್ಟ್ರದಲ್ಲಿ ಮಾತನಾಡುವ ಆಯಾ ಭಾಷೆಗಳಿಂದ ಒಡಗೂಡಿದ ದಿನ ಪತ್ರಿಕೆಗಳಲ್ಲಿ ಮದ್ಯಪಾನದಿಂದಾಗುವ ಅನಾಹುತಗಳನ್ನು ಎತ್ತಿ ಒಂದೊಂದಾಗಿ ಪ್ರಕಟಿಸುವರು. ಅದರಿಂದ ಜನಸಾಮಾನ್ಯರು ಸ್ವಲ್ಪ ಮಟ್ಟಿಗೆ ಎಚ್ಚರಿಕೆವಹಿಸಲು ಸಾಧ್ಯವಾಗುವದು.

೩) ಪ್ರತಿಯೊಬ್ಬ ಕುಡುಕನ ಕರುಣಕರ ಚಿತ್ರಣವನ್ನು ನಿರ್ಮಿಸಿ ಮದ್ಯಪಾನದ ಹಾನಿಗಳನ್ನು ತಿಳಿಸಿ ಸರ್ಕಾರದಿಂದ ನಿರ್ಮಿತ ಸಿನೇಮಾಗಳನ್ನು ಪ್ರತಿಯೊಂದು ಹಳ್ಳಿ, ನಗರ, ಪಟ್ಟಣಗಳಲ್ಲಿ

ಜನರಿಗೆ ಪ್ರಕ್ಕಟಿಯಾಗಿ ತೋರಿಸುವದು. ಆದರಿಂದ ಅವರ ಮನ ಒಲಿಸಲು ಸಾಧ್ಯವಾಗುವದು.

೪) ಮದ್ಯಪಾನ ನಿಷೇಧದ ಬಗ್ಗೆ ಸರಕಾರ ಯಾವದೇ ನಿರ್ಬಂಧನೆಗಳನ್ನು ಜಾರಿಗೊಳಿಸಿದ್ದರೆ ಮುಂಬರುವ ಬೇರೆ ಸರಕಾರವು ಸಹ ಅದೇ ನಿಯಮವನ್ನು ಅನುಸರಿಸಬೇಕು. ಸರಕಾರ ಬದಲಾದಂತೆ ಮದ್ಯಪಾನ ನಿಷೇಧ ಕಾಯ್ದೆಗಳು ಬದಲಾಗ ಬಾರದು.

೫) ಪ್ರತ್ಯೇಕ ರಾಷ್ಟ್ರೀಯ ಸೇವಾ ಯೋಜನೆ, ರಾಷ್ಟ್ರೀಯ ಸ್ವಯಂ ಸೇವಕ ವರ್ಗಗಳನ್ನು ನಿರ್ಮಿಸಿ ಕುಡಿತದ ಮೇಲೆ ಹತೋಟಿ ತರಲು ಹಳ್ಳಿ, ಪಟ್ಟಣಗಳಲ್ಲಿರುವ ಕುಡುಕರ ಮನ ಒಲಿಸುವ ಕಾರ್ಯಗಳಲ್ಲಿ ತೊಡಗಲು ಅಜ್ಞೆ ನೀಡಬೇಕು.

೬) ಮದ್ಯಪಾನ ನಿಷೇಧದಿಂದ ಸರಕಾರಕ್ಕೆ ಆಗುವ ಹಾನಿಯನ್ನು ಕುಡುಕರ ಮೇಲೆ ಹೇರಿ ತಮ್ಮ ಹಾನಿಯನ್ನು ತುಂಬಿಕೊಳ್ಳಬೇಕು.

೭) ಪ್ರತಿಯೊಬ್ಬ ಪಾಲಕ, ಪ್ರಾಧ್ಯಾಪಕ, ರಾಜಕಾರಣಿಗಳ ಮತ್ತು ಸಮಾಜ ಸೇವಕರ ಸಂಘಗಳನ್ನು ನಿರ್ಮಿಸಿ ಅವರಿಂದ ಪ್ರಚಾರ ಆಂದೋಲನ ನಡೆಸಬೇಕು. ಅಂದರೆ ಮಾತ್ರ ಅಮಲು ರೋಗದಿಂದ ಬಳಲುತ್ತಿರುವವರನ್ನು ನಿಯಂತ್ರಿಸಲು ಸಾಧ್ಯವಾಗುವದು.

೮) ಅಮಲುರೋಗಕ್ಕೆ ಬಲಿಯಾಗುತ್ತಿರುವ ತರುಣ ಯುವಕ, ಯುವತಿಯರಿಗೆ ಸುಲಭವಾಗಿ ಮದ್ಯ ದೊರೆಯದಂತೆ ಮಾಡಿ. ಅವರ ಮೇಲೆ ಪಾಲಕರು ಕಾಳಜಿವಹಿಸಬೇಕು.

೯) ಕಳ್ಳಭಟ್ಟಿ ಸರಾಯಿ ತಯಾರಿಕೆಯ ಮೇಲೆ ಸಂಪೂರ್ಣ ನಿಯಂತ್ರಣ ಹೇರಬೇಕು. 'ಸರಕಾರಿ ಸರಾಯಿ ಮಾರಾಟ ಕೇಂದ್ರ' ಗಳ ಪ್ರಮಾಣ ಕಡಿಮೆ ಮಾಡಬೇಕು,

೧೦) ಕುಡುಕರು ಮಿತಿಮೀರಿ ಮದ್ಯಸೇವನೆ ಮಾಡಿ ಸಮಾಜದ ಶಾಂತಿ ಮತ್ತು ಸುವ್ಯವಸ್ಥೆಗೆ ಆತಂಕ ಮಾಡಿದರೆ ಕಠಿಣ ಶಿಕ್ಷೆ ಒದಗಿಸಬೇಕು. ಅದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಬಿಗಿಗೊಳಿಸಬೇಕು.

೧೧) ಮದ್ಯಪಾನ ನಿರ್ಮೂಲನ ಕಾರ್ಯಕ್ರಮದಲ್ಲಿ ಭಾಗವಹಿಸಲು ಎಲ್ಲ ಐಚ್ಛಿಕ ಸಂಘ–ಸಂಸ್ಥೆಗಳಿಗೆ ಸರಕಾರ ಪ್ರೋತ್ಸಾಹ ನೀಡಿ ಅವುಗಳಿಗೆ ಹಣಕಾಸಿನ ನೆರವು ನೀಡಬೇಕು.

೧೨) ಕುಡುಕರಿಗೆ ಸರಕಾರಿ ಯಾವದೇ ರಂಗದಲ್ಲಿ ಉದ್ಯೋಗದ ಅವಕಾಶ ಒದಗಿಸಬಾರದು. ಸರಕಾರಿ ಸೇವೆಯಲ್ಲಿದ್ದು ಅಮಲುರೋಗಕ್ಕೆ ಅಂಟಿಕೊಂಡವರನ್ನು ಗುರುತಿಸಿ ಅಂಥವರನ್ನು ಕೆಲಸದಿಂದ ವಜಾ ಮಾಡಬೇಕು.

೧೩) ಭಾರತದಲ್ಲಿ ಈಗಾಗಲೇ ಯಾವ ರಾಜ್ಯ ಸರಕಾರ ಕಟ್ಟುನಿಟ್ಟಾದ ಮದ್ಯಪಾನ ನಿಷೇಧಗೊಳಿಸಿದೆಯೋ ಅದರಂತೆ ವಿವಿಧ ರಾಜ್ಯಗಳು ಸಹ ಆ ಪದ್ಧತಿಯನ್ನು ಜಾರಿಗೆ ತರಬೇಕು.

೧೪) ರಾಜ್ಯಸರಕಾರಗಳಿಗೆ ಮದ್ಯಪಾನ ನಿಷೇಧದಿಂದ ಉಂಟಾಗುವ ಹಾನಿಯನ್ನು ಪೂರ್ಣವಾಗಿ ತುಂಬಿಕೊಡಲು ಕೇಂದ್ರ ಸರಕಾರವು ಮುಂದೆ ಬರಬೇಕು.

೧೫) 'ಅನಾಮಿಕ ಅಮಲುಕೋರರ ಸಂಘ' ಪ್ರತಿ ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ತನ್ನ ತನ್ನ ಚಿಕ್ಕಪುಟ್ಟ ಶಾಖೆಗಳನ್ನು ನಿರ್ಮಿಸಬೇಕು. ಜನರಲ್ಲಿ ಐಕ್ಯ ಪ್ರಗತಿ, ಚೇತರಿಕೆಯ ತತ್ವಗಳನ್ನು ಬೋಧಿಸಬೇಕು.

೧೬) ಅಮಲುಕೋರತನದಿಂದ ಅಸೂಯೆ, ಅಂಜಿಕೆ, ವೈರತನ, ಪಶ್ಚಾತ್ತಾಪ, ಅಭದ್ರತೆ, ಅಸಮ್ಮತಿ, ಸ್ವಯಂ ಮರಣ ಈ ಅನಿಷ್ಟಗಳು ಬರುವವು ಎಂಬ ಭಯವನ್ನು ಜನರಲ್ಲಿ ಉಂಟು ಮಾಡಬೇಕು.

೧೭) ಕುಡುಕರು ಮನೋರೋಗಿಗಳೆಂದು ಭಾವಿಸಿ, ಅತಿಯಾಗಿ ಕುಡಿಯುವವರನ್ನು ಮನೋಚಿಕಿತ್ಸಾಲಯಗಳಲ್ಲಿ ಹಾಕಿ ಅವರಿಗೆ ಹೊಸಬಾಳು ಸಾಗಿಸಲು ಹೇಳಬೇಕು.

೧೮ ಅಲ್ಕೋಹಾಲ್ (ಮದ್ಯ)ವು ಕೇವಲ ಔಷಧೀಯ ಉದ್ದೇಶಕ್ಕಾಗಿ ವೈದ್ಯಕೀಯ ವೃತ್ತಿಯಲ್ಲಿರುವವರು ಕೊಡುವ ಸಲಹೆಗನುಸಾರವಾಗಿ, ಸರಕಾರವೇ ಸೂಚಿಸಿದ ಸ್ಥಳಗಳಲ್ಲಿ ದೊರೆಯುವಂತಾಗಬೇಕು.

೧೯) ಮದ್ಯಪಾನ ಪ್ರಚೋದನೆ ಕುರಿತು ಜಾಹೀರಾತುಗಳನ್ನು ತಡೆಗಟ್ಟಬೇಕು.

೨೦) ಆರಕ್ಷಕ ದಳ ಮತ್ತು ಎಕ್ಸೈಜ್ ದಳದವರಿಗೆ ಹೆಚ್ಚಿನ ಅಧಿಕಾರ ಕೊಟ್ಟು ಕುಡುಕರ ಗುಂಪಿನ ಮೇಲೆ ಮತ್ತು

ಗುಪ್ತವಾಗಿ ಮಾದಕ ದ್ರವ್ಯಗಳ ಮಾರಾಟಗಾರರ ಮೇಲೆ ದಾಳಿ ಮಾಡಿ, ಅವರಿಗೆ ಕಠಿಣ ಶಿಕ್ಷೆ ವಿಧಿಸಿ, ದಂಡ ವಸೂಲು ಮಾಡುವಂತೆ ಆದೇಶ ನೀಡಬೇಕು.

ಈ ಮೇಲೆ ನಮೂದಿಸಿದ ಇಪ್ಪತ್ತು ಅಂಶಗಳ ಸಲಹೆಯ ಕಾರ್ಯಕ್ರಮಗಳ ಪಟ್ಟಿಯನ್ನು ಸರ್ಕಾರ ಶೀಘ್ರವೇ ಜಾರಿಯಲ್ಲಿ ತರಬೇಕೆಂದು ಕೇಳಿಕೊಳ್ಳುವೆನು. ಸಮಸ್ತ ಭಾರತೀಯರು ಈ ಚಟದಿಂದ ದೂರವಿರಬೇಕೆಂದು ಆಶಿಸುವೆ.

ಗ್ರಂಥ ಋಣ

1 ಜಿ. ಆರ್. ಮದನ : ಭಾರತೀಯ ಸಾಮಾಜಿಕ ಸಮಸ್ಯೆ ಗಳು.

G. R, Madan "Indian Social Problems" Volume–I Second Edition 1966

2 ಎಚ್. ಬಿ, ಮಾಳಿ : 'ಭಾರತೀಯ ಸಾಮಾಜಿಕ ವಿಘಟನೆ'

3 ಡಾ. ಸಿ, ಆರ್. ಚಂದ್ರಶೇಖರ : ಸುದ್ದಿ ಸಂಗಾತಿ ವಾರ ಪತ್ರಿಕೆ. ದಿನಾಂಕ ಜನವರಿ ೧೯೮೭

4 ವರದಿ : 'ಆಲ್ಕೋಹಾಲಿಕ್ಸ್ ಅನಾನಿಮಸ್' ತರಂಗ ವಾರ ಪತ್ರಿಕೆ. ದಿನಾಂಕ ನವ್ಹಂಬರ ೧೯೮೪

5 ಕನ್ನಡಮ್ಮ ದಿನಪತ್ರಿಕೆ 'ಕ್ರೂರ ಕೊಲೆಗಾರ ಮದ್ಯಪಾನ' ದಿನಾಂಕ ೨೮–೧೧–೧೯೮೬

6 ಭಾವಜೀವಿ : ಗಾಂಧೀ ವಿಚಾರ ದರ್ಶನ

7 ಕೆ. ಸಿಂಗ್ : ಅಪರಾಧ ಮತ್ತು ಸಾಮಾಜಿಕ ಸಮಸ್ಯೆಗಳು

8 ಸರ್ವಜ್ಞನ ವಚನಗಳು : ಸರ್ವಜ್ಞನ ವಚನ ಸಂಗ್ರಹ, ನಿರ್ದೇಶಕರು ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ, ಬೆಂಗಳೂರು–೨

9 "Encyclopaedia Britannica" Volume–I

10 Dr. VATSYAYAN : "Social Disorganisation. 5th Revised Edition 1984–85

11 Dr. Baldev Singh : "Alcohol and Disorders of Nervous System"

ಉಪನ್ಯಾಸ ಗ್ರಂಥಮಾಲೆಯ
ಕೆಲವು ಪ್ರಕಟನೆಗಳು

೧ ಅಪರಾಧಿಗಳು ಹಾಗೂ ಅವರ ಸುಧಾರಣೆ

— ಎಸ್. ಎಫ್. ಪೂಜಾರ

೨ ಪೋಲೀಸಿನವರು ಮತ್ತು ಸಾರ್ವಜನಿಕರು

— ಎನ್. ನಾಗರಾಜರಾವ್

೩ ಅಭಿರುಚಿಗಳು

— ಎ. ಎಸ್. ಧರಣೇಂದ್ರಯ್ಯ

೪ ಧೂಮಪಾನ : ಒಂದು ವಿಷಪಾನ

— ಆರ್. ಸಿ. ಅಗಡಿ

೫ ಚಟಗಳು, ರೂಢಿಗಳು ಮತ್ತು ಕ್ಯಾನ್ಸರ

—ಎಸ್, ಜೆ. ನಾಗಲೋಟಿಮಠ

೬ ವಿಜ್ಞಾನವು ಅಪರಾಧಿಗಳನ್ನು ಹಿಡಿದು ಕೊಡಬಲ್ಲುದೆ ?

— ಬಿ. ಎಸ್. ಗಿರೆಪ್ಪಗೌಡರ

೭ ಭಾರತದಲ್ಲಿ ಸುಶಿಕ್ಷಿತ ನಿರುದ್ಯೋಗ ಸಮಸ್ಯೆ

—ಟಿ. ಸೋಮಶೇಖರ

೮ ಅನಿಷ್ಟ ಪದ್ಧತಿಗಳ ನಿರ್ಮೂಲನೆ

—ಎಂ. ಬಿ. ಪಾಟೀಲ

೯ ಮನೋರೋಗಗಳು

—ಎನ್. ಆರ್. ಕುಲಕರ್ಣಿ

೧೦ ಮೂಢನಂಬಿಕೆಗಳು

—ಎಲ್. ಆರ್. ಹೆಗಡೆ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ